
# ಕಾಳಜಿಯುಕ್ತ ಸಮಾಜದ ನಿರ್ಮಾಣ



**ಮೀನಾಕ್ಷಿ ಉಮೇಶ್**

“ನಾವು ಭೂಮಿಯನ್ನು ನಮ್ಮ ಪೂರ್ವಜರಿಂದ ಬಳುವಳಿಯಾಗಿ ಪಡೆದಿಲ್ಲ. ನಾವದನ್ನು ನಮ್ಮ ಮಕ್ಕಳಿಂದ ಎರವಲು ಪಡೆದಿದ್ದೇವೆ”

**ನಮ್ಮ ಮಕ್ಕಳು**

***“ನಿಮ್ಮ ಮಕ್ಕಳು ನಿಮ್ಮ ಮಕ್ಕಳಲ್ಲ.***

***ಅವರು, ಜೀವವು ತನ್ನನ್ನು ಕುರಿತು ಹೊಂದಿರುವ ಉತ್ಕಟ ಹಂಬಲದ ಪುತ್ರ ಪುತ್ರಿಯರು.***

***ಅವರು ನಿಮ್ಮ ಮೂಲಕ ಬರುತ್ತಾರೆ, ಆದರೆ ನಿಮ್ಮಿಂದ ಅಲ್ಲ, ಮತ್ತು ಅವರು ನಿಮ್ಮೊಡನೆ ಇದ್ದರೂ ನಿಮಗೆ ಸೇರಿದವರಲ್ಲ.”***
–ಖಲೀಲ್ ಗಿಬ್ರಾನ್

ಮಕ್ಕಳು ಹೂವಿನಂತೆ, ಪ್ರತಿಯೊಂದು ಮಗುವೂ ತನ್ನದೇ ರೀತಿಯಲ್ಲಿ ವಿಶಿಷ್ಟವಾದದ್ದು. ಅವು ನಮ್ಮ ಆಲೋಚನೆ, ಕ್ರಿಯೆಗಳನ್ನು ಬಿಂಬಿಸುವ ಕನ್ನಡಿಯಂತೆ. ಮಕ್ಕಳು ಹಕ್ಕಿಯಂತೆ ಜಗದಗಲ ಹಾರಿ, ಜಗವನರಿವ ಇಚ್ಛೆಯುಳ್ಳವರು. ಮಕ್ಕಳು, ತಾವು ಹುಟ್ಟಿದ ಕ್ಷಣದಿಂದಲೇ ಕಲಿಕೆಯಲ್ಲಿ ತೊಡಗಿಕೊಂಡಿರುವವರು. ಮಕ್ಕಳು ಸದಾ ಕುತೂಹಲಿಗಳು, ಪ್ರತಿಭಾನ್ವಿತ, ಸೃಜನಶೀಲ, ಹೊಸದನ್ನು ಕಂಡುಹಿಡಿಯುವ, ಅಷ್ಟೇ ಅಲ್ಲ ಇನ್ನೂ ಬಹಳ ಸಾಮರ್ಥ್ಯ ಹೊಂದಿರುವವರು. ದುರದೃಷ್ಟವೆಂದರೆ, ಸ್ವಲ್ಪ ಸಮಯಾನಂತರ ನಮ್ಮ ಸಾಮಾಜಿಕ ನಿರ್ಬಂಧಗಳು ಅವರ ರೆಕ್ಕೆಗಳನ್ನು ಕತ್ತರಿಸುತ್ತವೆ.

ಮಕ್ಕಳಿಗೆ ತಮ್ಮ ಜೊತೆಗೇ ತಾವಿರಲು ಹಾಗೂ ಪರಸ್ಪರರ ಜೊತೆಗಿರಲು ಸಮಯ ಬೇಕು. ಅವರಿಗೆ ಇತರರೊಡನೆ ಪರಸ್ಪರ ಸಂವಹಿಸುವ ಅಗತ್ಯವಿದೆ; ಅವರು ಹಂಚಿಕೊಳ್ಳಲು ಬಯಸುತ್ತಾರೆ, ಸ್ವತಃ ಮಾಡಲು, ಅನ್ವೇಷಿಸಲು ಇಷ್ಟಪಡುತ್ತಾರೆ. ಸ್ವಾವಲಂಬನೆಯ ಬೆಳವಣಿಗೆಯಲ್ಲಿ ಕೆಲಸದ ಪಾತ್ರವನ್ನು ವಿವರಿಸುತ್ತ ಮಾರಿಯಾ ಮೊಂಟೆಸ್ಸರಿ ಹೀಗೆ ಹೇಳುತ್ತಾರೆ– ಮಕ್ಕಳಿಗೆ ಪ್ರಪಂಚದ ಪ್ರತಿಕೃತಿಯನ್ನು ತಮ್ಮ ಮನಸ್ಸಿನಲ್ಲಿ ನಿರ್ಮಿಸಿಕೊಳ್ಳಲು ಸಮಯ ಬೇಕು. ಅವರಿಗೆ ಅಮೂರ್ತ ಸಂಗತಿಗಳನ್ನು, ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳಲು ಮೂರ್ತವಸ್ತು ಅಗತ್ಯವಿದೆ. ಮಕ್ಕಳಿಗೆ ತಾವೇ ರಚನಾತ್ಮಕ ಕಾರ್ಯಗಳನ್ನು ಮಾಡಲು ಸ್ವಾತಂತ್ರ್ಯವಿರಬೇಕು. ಸಾಮಗ್ರಿಗಳನ್ನು ನಿಭಾಯಿಸುವ ಹಾಗೂ ಕಾರ್ಯವನ್ನು ಪೂರ್ಣಗೊಳಿಸುವ ಪ್ರಕ್ರಿಯೆ ಮತ್ತು ವಿಧಾನಗಳು ಪರಿಸರವನ್ನು ಕುರಿತಾದ ಜವಾಬ್ದಾರಿ ಮತ್ತು ಸ್ವಯಂಶಿಸ್ತನ್ನು ಬಿತ್ತಿ ಬೆಳೆಸುತ್ತವೆ. ಮಹಾತ್ಮಾ ಗಾಂಧೀಜಿಯವರು ಮಕ್ಕಳು ವಿವಿಧ ರೀತಿಯ ರಚನಾತ್ಮಕ ಕೆಲಸಗಳನ್ನು ಮಾಡುವುದರ ಮೂಲಕ ಕಲಿಯುವ, ಕೆಲಸ ಮಾಡುವುದರಿಂದ ಏನನ್ನೋ ಸಾಧಿಸಿದ ಭಾವನೆಯನ್ನು ಹಾಗೂ ತೃಪ್ತಿಯನ್ನು ಹೊಂದುವ. ಶೈಕ್ಷಣಿಕ ವ್ಯವಸ್ಥೆಯ ಕನಸನ್ನು ಕಂಡಿದ್ದರು.

ನಮ್ಮ ಮನೋಭಾವ, ವರ್ತನೆ ಹಾಗೂ ಕಾಳಜಿಗಳು ನಾವು ಪಡೆದ ಶಿಕ್ಷಣದಿಂದ ಪ್ರಭಾವಿತವಾಗಿರುತ್ತವೆ. ಸಮಕಾಲೀನ ಶಿಕ್ಷಣ ವ್ಯವಸ್ಥೆಯಲ್ಲಿ ಮಕ್ಕಳನ್ನು ವಾಸ್ತವ ಸಂಗತಿಗಳ ಅಧ್ಯಯನ ಮಾಡಿ ಕಲಿಯುವಂತೆ ತೊಡಗಿಸಲಾಗುತ್ತದೆ. ತಾನು ‘ಎಲ್ಲರಿಗಿಂತ ಮೊದಲ ಸ್ಥಾನದಲ್ಲಿರಬೇಕು’ ಎನ್ನುವ ತೀವ್ರ ಪೈಪೋಟಿಗೆ ಅವರನ್ನು ನೂಕಲಾಗುತ್ತದೆ. “ಬಲವಾದವರು ಉಳಿದುಕೊಳ್ಳುವ” ಹೋರಾಟವಿದು. ಚಿಂತನೆಗೆ, ಪರ್ಯಾಲೋಚನೆಗೆ ಇಲ್ಲಿ ಸಮಯವಿಲ್ಲ. ಹಾಗಾಗಿ, ಮಕ್ಕಳು ತಾವು ಮಾಡುವ ಕೆಲಸಗಳಿಗೆ ಹಾಗೂ ನಂತರದ ಅದರ ಪರಿಣಾಮಗಳಿಗೆ ಜವಾಬ್ದಾರರಾಗುವುದನ್ನು ಕಲಿಯುವಲ್ಲಿ ವಿಫಲರಾಗುತ್ತಾರೆ.

ಈ ತರಹದ ಶಿಕ್ಷಣವು ಮಕ್ಕಳನ್ನು ಭೂತಾಯಿಯಿಂದ ಬೇರ್ಪಡಿಸುವುದಷ್ಟೇ ಅಲ್ಲ, ಪ್ರಕೃತಿಯ ಜೊತೆಗಿನ ತಮ್ಮ ಸಂಬಂಧ ಮತ್ತು ಅದರ ಮೇಲಿನ ಅವಲಂಬನೆಯೆಡೆಗೆ ಅವರನ್ನು ಸಂವೇದನಾರಹಿತರನ್ನಾಗಿ ಮಾಡುತ್ತದೆ. ಅವರಿಗೆ ಜೀವನ ಮೌಲ್ಯಗಳು ಮಹತ್ವದ ವಿಷಯಗಳಾಗುವುದೇ ಇಲ್ಲ, ಇತರ ಜನರ ಕುರಿತಾಗಿ ಸಹಾನುಭೂತಿಯ ಭಾವನೆಗಳಿರುವುದಿಲ್ಲ. ಅವರು ದುಗುಡ, ತಳಮಳ, ಅಸಹಾಯಕತೆ ಮತ್ತು ಸ್ವಾರ್ಥ, ಸ್ವ–ಕೇಂದ್ರಿತ ಭಾವನೆಯಿಂದ ತುಂಬಿದವರಾಗಿರುತ್ತಾರೆ, ಶಾಲೆಗೆ ಹೋಗಲು ಆರಂಭಿಸಿದ ಮೊದಲ ದಿನದಿಂದಲೇ ತಮ್ಮ ಚಲನೆಯ ಸ್ವಾತಂತ್ರ್ಯವು ಕೇವಲ ಮೇಜು, ಕುರ್ಚಿಗಳಿಗೆ ಸೀಮಿತವಾಗಿರುವ ಪ್ರಥಮ ನಿರ್ಬಂಧದ ಅನುಭವವು ಅವರಿಗಾಗುತ್ತದೆ. ಸಾಮಾನ್ಯವಾಗಿ ಅತ್ತಿತ್ತ ಓಡುವುದು, ಸಂತೋಷದಿಂದ ನಗುವುದು ಇತ್ಯಾದಿಗಳಲ್ಲಿ ಹರಿಯುತ್ತಿದ್ದ ಅವರ ಶಕ್ತಿಯ

ಪ್ರವಾಹಕ್ಕೆ ತಡೆಯೊಡ್ಡಲಾಗುತ್ತದೆ. ಹತಾಶ ಭಾವನೆಯಿಂದ ಬಳಲುವ ಮಕ್ಕಳು ಅದನ್ನು ಒಂದೋ ಕಣ್ಣೀರು, ಇಲ್ಲವೇ ಹಿಂಸಾತ್ಮಕ ಕ್ರಿಯೆಗಳ ಮೂಲಕ ವ್ಯಕ್ತಪಡಿಸುತ್ತಾರೆ. ಹತಾಶೆಯು ವಿರೋಧಕ್ಕೆ ಸಾಮಾನ್ಯವಾಗಿ ಕಂಡುಬರುವ ಭಾವನಾತ್ಮಕ ಪ್ರತಿಕ್ರಿಯೆ. ಇದು ಸಿಟ್ಟು ಮತ್ತು ನಿರಾಶೆಗಳಿಗೆ ಸಂಬಂಧಿಸಿದ್ದು, ವ್ಯಕ್ತಿಗತ ಇಚ್ಛೆಗಳನ್ನು ಪೂರೈಸಿಕೊಳ್ಳಲು ವಿರೋಧವಿದೆ ಎಂಬ ಗ್ರಹಿಕೆಯಿಂದ ಉಂಟಾಗುತ್ತದೆ. ಪ್ರೇರೇಪಿತ ವರ್ತನೆಗೆ ತಡೆಯೊಡ್ಡಿದಾಗ ಹತಾಶೆಯು ಕಾಣಿಸಿಕೊಳ್ಳಬಹುದು. ಪ್ರತಿವ್ಯಕ್ತಿಯೂ ಬೇರೆ ಬೇರೆ ರೀತಿಯಲ್ಲಿಯೇ ಪ್ರತಿಕ್ರಿಯಿಸಬಹುದು. ಅಡ್ಡಿಯನ್ನು ಮೆಟ್ಟಿ ನಿಲ್ಲಲು ವ್ಯಕ್ತಿಯೊಬ್ಬ ತರ್ಕಬದ್ಧ,ಸಮಸ್ಯಾ-ಪರಿಹಾರ ವಿಧಾನಗಳನ್ನು ಬಳಸಬಹುದು. ಅದರಲ್ಲಿ ವಿಫಲರಾದಾಗ ವ್ಯಕ್ತಿ ಹತಾಶನಾಗಿ ವಿವೇಚನಾರಹಿತವಾಗಿ ಮತ್ತು ಆಕ್ರಮಣಕಾರಿಯಾಗಿ ವರ್ತಿಸಬಹುದು.

ಪ್ರಸ್ತುತ ಶಿಕ್ಷಣ ಪದ್ಧತಿಯು ಮಕ್ಕಳ ವ್ಯಕ್ತಿತ್ವವನ್ನು ಆ ಮೂಲಕ ಸಮಾಜವನ್ನು ಹೇಗೆ ಪ್ರಭಾವಿಸುತ್ತದೆ ಎನ್ನುವುದರ ಬಗ್ಗೆ ಅರಿವು ಬಂದಿದೆ. ಇತರ ವ್ಯಕ್ತಿಗಳು, ಮರಗಿಡ, ಪ್ರಾಣಿಗಳನ್ನು ಕುರಿತಾದ ಮಕ್ಕಳ ಸಂವೇದನಾಶೂನ್ಯ ಮನೋಭಾವಗಳಿಗೆ ಪ್ರಸ್ತುತ ಶಿಕ್ಷಣ ಪದ್ಧತಿಯಿಂದ ಮೈಗೂಡಿಸಿಕೊಂಡ ಪಾಠಗಳು ಕೊಡುಗೆ ನೀಡಿವೆ. ಪ್ರಸ್ತುತ ಶಿಕ್ಷಣ ಪದ್ಧತಿಯಲ್ಲಿ ಕೇವಲ ಸ್ಪರ್ಧೆ, ಪೈಪೋಟಿಗಷ್ಟೇ ಜಾಗವಿದೆ. ಇದು ಬ್ರಿಟಿಷರು ಭಾರತಕ್ಕೆ ಪರಿಚಯಿಸಿದ, 'ಒಡೆದು ಆಳುವ ನೀತಿ'ಯ ವಿಸ್ತರಣೆಯಾಗಿದೆ. ಪೈಪೋಟಿಯು ಅಸೂಯೆ, ದ್ವೇಷ, ಅನ್ಯಾಯ, ದುರಾಸೆ ಮತ್ತು ಅಸಡ್ಡೆಗಳನ್ನು ಸಾಕಿ ಸಲಹುತ್ತದೆ. ಇಂದಿನ ಕೆಲ ಯುವಕ/ಯುವತಿಯರ, ವಿಶೇಷವಾಗಿ ಪೈಪೋಟಿಗೆ ಹೆಚ್ಚಿನ ಒತ್ತು ಇರುವ ನಗರಗಳಲ್ಲಿನ ಯುವಪೀಳಿಗೆಯ ಮನೋಭಾವ, ವರ್ತನೆಗಳು ಆತ್ಮಹತ್ಯಾ ಅಥವಾ ಮಾನವಹತ್ಯಾ ಸ್ವರೂಪದ್ದಾಗಿದ್ದಲ್ಲಿ ಯಾವ ಆಶ್ಚರ್ಯವೂ ಇಲ್ಲ.

ಬೋಧನಾ ವಿಷಯವನ್ನಷ್ಟೇ ಅಲ್ಲ, ಶಿಕ್ಷಣ ಪದ್ಧತಿಯನ್ನೇ ಮರುವಿಮರ್ಶಿಸುವುದು, ಮರುಪರಿಶೀಲನೆ ಮಾಡುವುದು ಮತ್ತು ಮರುವಿನ್ಯಾಸಗೊಳಿಸುವುದು, ಮಕ್ಕಳ ಪಾಲನೆ-ಪೋಷಣೆ ಹಾಗೂ ರಕ್ಷಣೆಯ ಹೊಣೆಹೊತ್ತ ನಮ್ಮೆಲ್ಲರ ಜವಾಬ್ದಾರಿ. ಭೂಮಿ ಮತ್ತು ಎಲ್ಲ ತರಹದ ಜೀವಿಗಳನ್ನು ಕುರಿತಾದ ಕಾಳಜಿಯ ಮೂಲಕ ಸಹಕಾರ, ಪ್ರೀತಿ, ಸೌಹಾರ್ದತೆಗಳನ್ನು ಉತ್ತೇಜಿಸುವ ಸಮಾಜವೊಂದನ್ನು ನಿರ್ಮಿಸಲು ಇಂದಿನ ಮಕ್ಕಳು ಏನಾಗಬೇಕೋ ಅದಾಗಲು ನೆರವು ನೀಡುವ ಶಿಕ್ಷಣ ಪದ್ಧತಿಯ ಅಗತ್ಯ ನಮಗಿದೆ.

ಇರುವುದೊಂದೇ ಭೂಮಿ, ಅದನ್ನು ಕುರಿತು ಕಾಳಜಿ ವಹಿಸಬೇಕಾಗಿದ್ದು, ಆ ಕಾಳಜಿಯನ್ನು ರೂಢಿಸುವ ನಿಟ್ಟಿನಲ್ಲಿ ಪಠ್ಯಕ್ರಮವನ್ನು ಮರುವಿನ್ಯಾಸಗೊಳಿಸಲು ಇದೇ ಸುಸಮಯ.

## ಅಧ್ಯಯನ ವಿಷಯದಲ್ಲಿ ಮರಗೆಲಸವನ್ನು ಸೇರಿಸುವುದರ ಧ್ಯೇಯೋದ್ದೇಶಗಳು

### 1. ಸಹಜ ಕಲಿಕೆಯ ಪ್ರಕ್ರಿಯೆ



ಜ್ಞಾನವು ಪುಸ್ತಕಕ್ಕೆ ಸೀಮಿತವಾಗದಂತೆ ಮಾಡುವುದು ಹಾಗೂ ಶಾಲೆಯಲ್ಲಿನ ಶೈಕ್ಷಣಿಕ ಪ್ರಕ್ರಿಯೆಯು ಮಕ್ಕಳದೇ ಆದ ಸಹಜ ಕಲಿಕೆಯ ಪ್ರಕ್ರಿಯೆಯ ಮತ್ತು ಅವರ ಬದುಕಿನ ಮುಂದುವರೆದ ಭಾಗವಾಗುವಂತೆ ಮಾಡುವುದು, ಅದರ ಅರ್ಥ, ಅನುಭವವು (ಐದು ಇಂದ್ರಿಯಗಳ ಹಾಗೂ ತರ್ಕ ಎಂಬ ಆರನೆಯ ಇಂದ್ರಿಯದ ಮೂಲಕ) ಜ್ಞಾನವನ್ನು ಪಡೆದುಕೊಳ್ಳುವ ಪ್ರಾಥಮಿಕ ಮಾಧ್ಯಮವಾಗಿರುತ್ತದೆ.

### 2. ಅಹಿಂಸೆ

ಅಹಿಂಸೆಯನ್ನು ತನ್ನ ಕೇಂದ್ರಭಾಗದಲ್ಲಿರಿಸಿಕೊಂಡ ಶೈಕ್ಷಣಿಕ ಪ್ರಕ್ರಿಯೆಯೊಂದನ್ನು ಹುಟ್ಟುಹಾಕುವುದು. ಸಾಂಪ್ರದಾಯಿಕ ಪದ್ಧತಿಯಲ್ಲಿ ಮಾಹಿತಿ ಮತ್ತು ಅನುಭವಗಳ ತೀವ್ರ ಅಸಮತೋಲನವಿದೆ. ಅದು ಅಸಾಮರಸ್ಯವನ್ನು ಉಂಟುಮಾಡಿ ಆಂತರಿಕ ಹಾಗೂ ಬಾಹ್ಯ ಕ್ರೌರ್ಯಕ್ಕೆ ಎಡೆಮಾಡಿಕೊಡುತ್ತದೆ. ಅಹಿಂಸೆಯೇ ಪ್ರಕ್ರಿಯೆ ಹಾಗೂ ಫಲಿತ ಎರಡೂ ಆಗಿಸುವಂತಹ ಪರಿಕಲ್ಪನೆಯೊಂದಿಗೆ ಈ ಪಠ್ಯಕ್ರಮವನ್ನು ವಿಕಸಿತಗೊಳಿಸಲಾಗುತ್ತಿದೆ.

### 3. ಅನುಭವಾತ್ಮಕ ಕಲಿಕೆ



ಮಗುವಿನ ಮನಸ್ಸಿನಲ್ಲಿ ಅನುಭವಗಳ ಮೂಲಕ ಜ್ಞಾನವು ಹಂತಹಂತವಾಗಿ ಹೆಚ್ಚುವಂತೆ ಮಾಡುವ, ಅದನ್ನು ಉತ್ತೇಜಿಸುವ ಕಲಿಕೆಯ ವಾತಾವರಣವನ್ನು ನಿರ್ಮಿಸುವುದು.

### 4. ಜ್ಞಾನದ ಸಂಶ್ಲೇಷಣೆ

ಶಿಕ್ಷಕರು ಮತ್ತು ಪಠ್ಯಕ್ರಮ ಪ್ರಕ್ರಿಯೆಯ ಇನ್ನಿತರ ಭಾಗೀದಾರರಲ್ಲಿ ಈ ಕೆಳಗಿನ ಮನೋಭಾವವನ್ನು ಹುಟ್ಟುಹಾಕುವುದು, ಜ್ಞಾನ ಪ್ರಕ್ರಿಯೆಯೆನ್ನುವುದು ಒಂದು ಸುಸಂಘಟಿತ ಪ್ರಕ್ರಿಯೆ ಹಾಗೂ ಸಹಜವಾಗಿಯೇ ಇದಕ್ಕಾಗಿ ವಿದ್ಯಾರ್ಥಿಯು ಮಾಹಿತಿಯ ತುಣುಕುಗಳನ್ನು ಒಂದಕ್ಕೊಂದು ಕೂಡಿಸುವ ಮತ್ತು ಸಂಯೋಜಿಸುವ ಸಾಮರ್ಥ್ಯವನ್ನು

ಬೆಳೆಸಿಕೊಳ್ಳಬೇಕಾದ ಅಗತ್ಯವಿದೆ. ವಿದ್ಯಾರ್ಥಿಗಳು ತಮ್ಮದೇ ಕೈಗಳನ್ನು ಉಪಯೋಗಿಸಿ ಏನನ್ನಾದರೂ ಮಾಡುವುದರಿಂದ ಈ ಸಾಮರ್ಥ್ಯವು ಬಹಳಷ್ಟು ಹೆಚ್ಚುತ್ತದೆ. ಕಲಿಕೆಯೆನ್ನುವುದು ಒಂದು ನಿರಂತರ ಪ್ರಕ್ರಿಯೆ. ಮಕ್ಕಳು ತಮ್ಮದೇ ಕೈಗಳಿಂದ ವಸ್ತುಗಳನ್ನು ತಯಾರಿಸುವಾಗ, ದೈನಂದಿನ ಬದುಕಿನೊಡನೆ ಪರಿಕಲ್ಪನೆಗಳ ಸಂಬಂಧವನ್ನು ಗುರಿತಿಸಲು ಮತ್ತು ದೈನಂದಿನ ಬದುಕಿನೊಡನೆ ಅವು ಹೊಂದಿರುವ ಸಂಬಂಧವನ್ನು ಅರ್ಥಮಾಡಿಕೊಳ್ಳಲು ಸಮರ್ಥರಾಗುತ್ತಾರೆ.

**5. ಸ್ವಾಯತ್ತತೆ/ಸ್ವಾವಲಂಬನೆ**

ಬೋಧಕರಿರಲಿ, ಮಗುವಿರಲಿ, ಒಂದು ತರಗತಿ ಅಥವಾ ಶಾಲೆ ಹೀಗೆ ಯಾವುದೇ ಘಟಕವಾಗಿರಲಿ, ಅಂತಹ ಪ್ರತಿ ಘಟಕವೂ ಸ್ವಾಯತ್ತತೆ ಮತ್ತು ಸ್ವಾವಲಂಬನೆಯನ್ನು ಹೊಂದಿರುವಂತಹ ಕಲಿಕೆಯ ವಾತಾವರಣವನ್ನು ಮತ್ತು ಪ್ರಕ್ರಿಯೆಯನ್ನು ನಿರ್ಮಿಸುವುದು.



ಪಠ್ಯಕ್ರಮವನ್ನು ಅಭಿವೃದ್ಧಿ ಪಡಿಸುವ ಪ್ರಕ್ರಿಯೆಯಲ್ಲೆ ಶಿಕ್ಷಕ ಮತ್ತು ಮಗು ಇಬ್ಬರೂ ಭಾಗವಹಿಸುವಂತೆ ಮತ್ತು ಅವರು ಇದು ನಮ್ಮದು ಎಂಬ ಭಾವನೆಯನ್ನು ಹೊಂದುವಂತೆ ಮಾಡಿ ಇದನ್ನು ಸಾಧಿಸಬೇಕು, ಆ ಮೂಲಕ ಅದನ್ನು ಚೈತನ್ಯಶೀಲ ಮತ್ತು ವಿಕಸನಶೀಲವನ್ನಾಗಿಸಿ ಪ್ರಸ್ತುತ ಸನ್ನಿವೇಶಕ್ಕೆ, ಬದಲಾಗುತ್ತಿರುವ ಜಗತ್ತಿಗೆ ಮತ್ತು ಸಮಾಜಕ್ಕೆ ಸ್ಪಂದಿಸುವ ಹಾಗೆ ಮಾಡಿ ಸಾಧಿಸಬೇಕು.

**6. ಅರಿಯುವುದಕ್ಕೆ ದೇಸೀ ವಿಧಾನಗಳು– ಸಮಗ್ರ / ಬಹು ವಿದ್ಯಾವಿಭಾಗದ ವಿಧಾನಗಳು**

ಪಾರಂಪರಿಕ ಅಥವಾ ಸಾಂಪ್ರದಾಯಿಕ ಜ್ಞಾನಪದ್ಧತಿಗಳನ್ನು ಹಾಗೂ ಅರಿಯುವ ಮಾರ್ಗಗಳನ್ನು ಅಂಗೀಕರಿಸುವುದು, ಮನ್ನಣೆ ನೀಡುವುದು ಹಾಗೂ ಅವುಗಳೊಡನೆ ಆಳವಾದ ಸಂವಾದ ನಡೆಸುವುದು. ವಿಷಯಗಳನ್ನು ಸಮಗ್ರ ಮತ್ತು ಬಹುವಿದ್ಯಾವಿಭಾಗದ ನೆಲೆಗಳಿಂದ ನೋಡುವುದರ ಮೂಲಕ ಇದನ್ನು ಚೆನ್ನಾಗಿ ಪಠ್ಯಕ್ರಮದಲ್ಲಿ ಅಳವಡಿಸಬಹುದು.



**7. ಸ್ವ–ಜ್ಞಾನ:** ಮಗುವಿಗೆ ತನ್ನ ಸಾಮರ್ಥ್ಯ, ಬಲ, ದೌರ್ಬಲ್ಯಗಳನ್ನು ಕುರಿತು ಅರಿವು ಮೂಡಿಸುವಂತಹ ಸಹಯೋಗದ ವಾತಾವರಣವೊಂದನ್ನು ನಿರ್ಮಿಸುವುದರ ಮೂಲಕ ಗುಣವೈಶಿಷ್ಟ್ಯ ನಿರ್ಮಾಣ ಮಾಡುವುದು. ಶೈಕ್ಷಣಿಕ ವಿಷಯಗಳಲ್ಲಿ ಕಡಿಮೆ ಆಸಕ್ತಿ ಹೊಂದಿರುವ ಮಕ್ಕಳಿಗೆ ಇನ್ನಿತರ ರೀತಿಯಲ್ಲಿ ವಿಷಯದ ಪರಿಕಲ್ಪನೆಗಳೊಡನೆ ಸಂಬಂಧ ಕಂಡುಕೊಳ್ಳಲು ಅವಕಾಶ ಒದಗಿಸುವುದು ಮತ್ತು ಆ ಮೂಲಕ ಅವರು ಶೈಕ್ಷಣಿಕ ವಿಷಯಗಳತ್ತ ಗಮನ ಹರಿಸುವಂತೆ ಸ್ಫೂರ್ತಿ ನೀಡುವುದು.

ಮಕ್ಕಳು ವಿವಿಧ ರೀತಿಯ ಮರಗಳನ್ನು ಸ್ಪರ್ಶಿಸಿ, ತಡವಿ ಅವುಗಳಿಂದ ವಿಧವಿಧದ ವಸ್ತುಗಳನ್ನು ತಯಾರಿಸುವುದರಿಂದ, ಅವುಗಳಿಗೆ ಪಾಲೀಷು ಹಾಕುವುದು. ಕುಶಲ ಕೆಲಸಮಾಡುವುದು ಹೊಸತೊಂದನ್ನು ತಯಾರಿಸುವುದರಿಂದ ಹಿಂದೆಂದಿಗಿಂತಲೂ ಹೆಚ್ಚು ಗಾಢವಾಗಿ ಅವರು ಮರಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಇದರಿಂದ ಮುಂದೆ ಅವರು ಪರಿಸರವನ್ನು ಕುರಿತು ಕಾಳಜಿಯುಳ್ಳ ವ್ಯಕ್ತಿಗಳಾಗಿ ಹೊರಹೊಮ್ಮುತ್ತಾರೆ. ಪರಸ್ಪರ ಪೈಪೋಟಿಗಿಳಿಯುವ ಬದಲಾಗಿ ಒಬ್ಬರಿಗೊಬ್ಬರು ಸಹಾಯ ಮಾಡುತ್ತಾರೆ. ಸರಳ ಉಪಕರಣಗಳನ್ನು ಉಪಯೋಗಿಸುವ ಮತ್ತು ಎಚ್ಚರವಹಿಸುವ ಸಾಮರ್ಥ್ಯವನ್ನು ಕಲಿಯುತ್ತಾರೆ, ಅವರ ಕೈ–ಕಣ್ಣುಗಳ ಹೊಂದಾಣಿಕೆ. ಸ್ಥಳಾವಕಾಶವನ್ನು ವ್ಯವಸ್ಥಿತವಾಗಿ ಬಳಸುವ ಸಾಮರ್ಥ್ಯ ಮತ್ತು ಶಿಸ್ತು ಸುಧಾರಿಸುತ್ತದೆ. ಅವರು ಪರಿಶ್ರಮದ ಬೆಲೆಯನ್ನು ಅರಿಯುತ್ತಾರೆ, ಏನನ್ನಾದರೂ ಸೃಷ್ಟಿಸುವ ಕ್ರಿಯೆಯಲ್ಲಿ ಸಿಗುವ ಸಂತೃಪ್ತಿಯ ಭಾವವನ್ನು ಅನುಭವಿಸುತ್ತಾರೆ, ನಮ್ಮ ಕಲ್ಪನೆಗೂ ಮೀರಿ ಅವರ ಆತ್ಮವಿಶ್ವಾಸ ಮತ್ತು ಸ್ವಾವಲಂಬನೆಯ ಗುಣಗಳು ವೃದ್ಧಿಸುತ್ತವೆ. ತಾವು ತಯಾರಿಸಿದ ಸುಂದರವಾದ ಮತ್ತು ಉಪಯೋಗಿಸಬಹುದಾದ ವಸ್ತುಗಳಲ್ಲಿ ಅವರು ತಮ್ಮನ್ನೇ ತಾವು ಕಂಡುಕೊಳ್ಳುತ್ತಾರೆ. ಚಿಂತನೆ, ಶ್ರದ್ಧೆ, ಕಾರ್ಯತತ್ಪರತೆ ಹಾಗೂ ಪರಿಪೂರ್ಣತೆಯ ಸಾಧನೆಗೆ ಪ್ರಯತ್ನ ಅವರ ವ್ಯಕ್ತಿತ್ವದ ಭಾಗವೇ ಆಗಿಬಿಡುತ್ತದೆ. ಅವರ ಶರೀರ ಮತ್ತು ಆತ್ಮದಲ್ಲಿ ಅದೇನೋ ಸಂಚಲನ ಆರಂಭವಾಗುತ್ತದೆ. ಅವರು ಸುಂದರ ಪ್ರಾಮಾಣಿಕ, ಸೃಜನಶೀಲ ಮತ್ತು ಸಂತೃಪ್ತ ವ್ಯಕ್ತಿಗಳಾಗಿ ಬೆಳೆಯುತ್ತಾರೆ.

ಹರ್ಬರ್ಟ್ ರೀಡ್ ಹೇಳುವ ಹಾಗೆ, 'ಮಗುವಿನ ಕಲಾಕೃತಿ ಅದರ ಸ್ವಾತಂತ್ರ್ಯಕ್ಕೆ, ಅದರ ಪ್ರತಿಭೆ, ವರದಾನಗಳು ಫಲಪ್ರದವಾಗುವುದಕ್ಕೆ ಮತ್ತು ತನ್ನ ವಯಸ್ಕ ಜೀವನದಲ್ಲಿ ನೈಜ ಹಾಗು ಸ್ಥಿರ ಸಂತೋಷವನ್ನು ಹೊಂದುವುದಕ್ಕೆ ರಹದಾರಿ ಇದ್ದಂತೆ. ಕಲೆ ಹಾಗೂ ಕುಶಲಕಲೆ ಮಗುವನ್ನು ತನ್ನೊಳಗಿಂದ ಅರಳಿಸುತ್ತವೆ. ಮೊದಲಿಗೆ ಅದು, ತನ್ನಲ್ಲೇ ತಾನು ಮುಳುಗಿ ಕಾಗದದ ತುಂಡೊಂದರ ಮೇಲೆ ಗೀಚುವ ಮಗುವಿನ ಹಾಗೆ, ಒಂಟಿಯಾಗಿ ಮಾಡುವ ಯಾವುದೇ ಚಟುವಟಿಕೆಯಾಗಿ ಪ್ರಾರಂಭವಾಗಬಹುದು. ಆದರೆ, ಮಗು ತನ್ನ ಆಂತರ್ಯದ ಜಗತ್ತನ್ನು ಸಹಾನುಭೂತಿಯಿಂದ ನೋಡುವ ನೋಡುಗನಿಗೆ ಸಂವಹಿಸಲು ಹಾಗೆ ಗೀಚುತ್ತದೆ.'

ರವೀಂದ್ರನಾಥ ಠಾಕೂರರು ಹೀಗೆ ಬರೆದಿದ್ದಾರೆ: 'ಇಡೀ ಮನುಕುಲದ ಏಕತೆಯನ್ನು ಗುರಿಯಾಗಿಟ್ಟುಕೊಂಡು ಶೈಕ್ಷಣಿಕ ಪ್ರಕ್ರಿಯೆಗಳನ್ನು ವಿನ್ಯಾಸಗೊಳಿಸಿದ್ದೇ ಆದರೆ, ಅದರ ಆರಂಭವು ತನ್ನ ತಾಯಿ, ತನ್ನ ನಿಕಟ ಕುಟುಂಬ ಹಾಗೂ ಅಂತಿಮವಾಗಿ ವಿಶ್ವಪ್ರೇಮದೆಡೆಗೆ ಮಗುವು ಬೆಳೆಸಿಕೊಳ್ಳುವ ಪ್ರೀತಿಯಲ್ಲಿದೆ. ಆದರೆ ಈ ಏಕತೆಯ ಬುನಾದಿ ಸೃಜನಶೀಲತೆಯಲ್ಲಿದೆ.'

| ಮರಗೆಲಸ ಮತ್ತು ಸಮಕಾಲೀನ ಶಿಕ್ಷಣದಲ್ಲಿ ಅದರ ಪಾತ್ರ | | | | |
|---|---|---|---|---|
| **ಚಟುವಟಿಕೆ** | **ವಯೋಮಾನ ಗುಂಪು / ತರಗತಿ 5–8 ವರ್ಷಗಳು** | **ವಯೋಮಾನ ಗುಂಪು / ತರಗತಿ 8–11 ವರ್ಷಗಳು** | **ವಯೋಮಾನ ಗುಂಪು / ತರಗತಿ 11–14 ವರ್ಷಗಳು** | **ಬೆಳೆಸಲಾದ ಗುಣಗಳು** |
| **ಲಯ** 5 ನಿಮಿಷಗಳು | ಚಪ್ಪಾಳೆ, ಹೆಜ್ಜೆ ಮತ್ತು '**ನಾನು ಏನನ್ನು ಮಾಡುತ್ತೇನೋ ಅದನ್ನು ಚೆನ್ನಾಗಿ ಮಾಡುತ್ತೇನೆ**' ಎಂಬ ಸಕಾರಾತ್ಮಕ ದೃಢೀಕರಣ ವಾಕ್ಯಗಳಿಂದ ಆರಂಭಿಸಿ. ಒಂದು ವರ್ತುಲದಲ್ಲಿ ನಿಂತುಕೊಳ್ಳಿ, ಮೊದಲ ಬಾರಿಗೆ ಪ್ರತೀ ಪದಕ್ಕೂ ಚಪ್ಪಾಳೆ ತಟ್ಟಿ, ಎರಡನೆಯ ಬಾರಿಗೆ ಹೇಳಿದಾಗ ಮೊದಲ 5 ಪದಗಳಿಗೆ ಚಪ್ಪಾಳೆ ತಟ್ಟಿ ಒಂದು ಪದಕ್ಕೆ ಹೆಜ್ಜೆ ಕುಟ್ಟಿ, ನಂತರ 4 ಪದಗಳಿಗೆ ಚಪ್ಪಾಳೆ ತಟ್ಟಿ, ಎರಡು ಪದಗಳಿಗೆ ಹೆಜ್ಜೆ ಕುಟ್ಟಿ. ಹೀಗೆ ಒಂದು ಪದಕ್ಕೆ ಚಪ್ಪಾಳೆ ಮತ್ತು 5 ಪದಗಳಿಗೆ ಹೆಜ್ಜೆ ಕುಟ್ಟುವವರೆಗೂ ಮುಂದುವರೆಸಿ. ಕೊನೆಯಲ್ಲಿ ಎಲ್ಲ ಪದಗಳಿಗೂ ಹೆಜ್ಜೆ ಕುಟ್ಟಿ. ಇದೇ ಚಟುವಟಿಕೆಯನ್ನು ಹಿಮ್ಮುಖವಾಗಿ ನಡೆಸಿ. | **ನಾನು ನನ್ನ ಮಾರ್ಗದಲ್ಲಿ ಧೈರ್ಯವಾಗಿ, ದೃಢವಾಗಿ ನಡೆಯುತ್ತೇನೆ**.' ಎಂದು ಹೇಳುತ್ತ ಮುಂದೆ ನಡೆಯುವ ತುಸು ಸಂಕೀರ್ಣ ಲಯ. ಮೊದಲು ಒಂದೊಂದು ಪದಕ್ಕೆ ಒಂದೊಂದು ಹೆಜ್ಜೆಯಂತೆ ಎಲ್ಲ ಎಂಟೂ ಹೆಜ್ಜೆಗಳನ್ನು ಮುಂದಕ್ಕೆ ಹಾಕುತ್ತ ನಡೆಯಿರಿ. ನಂತರ ಏಳು ಹೆಜ್ಜೆಗಳನ್ನು ಮುಂದಕ್ಕೆ ಹಾಕಿ, ಒಂದು ಹೆಜ್ಜೆ ಹಿಂದಕ್ಕೆ ಹಾಕಿ. ನಂತರ ಆರು ಹೆಜ್ಜೆ ಮುಂದಕ್ಕೆ ಮತ್ತು ಎರಡು ಹೆಜ್ಜೆ ಹಿಂದಕ್ಕೆ. ಹೀಗೆ ಎಲ್ಲಾ ಹೆಜ್ಜೆಗಳನ್ನು ಹಿಂದಕ್ಕೆ ಹಾಕುವ ತನಕ ಮುಂದುವರೆಸಿ. ಚಟುವಟಿಕೆಯನ್ನು ಹಿಮ್ಮುಖವಾಗಿ ನಡೆಸಿ. | ನಿಮ್ಮ ಕಾಲ್ಬೆರಳುಗಳ ಮೇಲೆ(ತುದಿಗಾಲಿನಲ್ಲಿ) ನಿಂತು, ಒಮ್ಮೆಗೆ ಒಂದು ವಾಕ್ಯದಂತೆ ಮೂರು ಬಾರಿ ಹೇಳಿ. **ನಾನು ಶಕ್ತಿಶಾಲಿ, ನಾನೇ ಶಕ್ತಿ, ನಾನು ಆರೋಗ್ಯವಾಗಿದ್ದೇನೆ, ನಾನೇ ಆರೋಗ್ಯ**. **ನಾನು ಸಂಪದ್ಭರಿತನಾಗಿದ್ದೇನೆ, ನಾನೇ ಸಂಪತ್ತು**. **ನಾನು ಚಿಂತೆ ಮಾಡುವುದಿಲ್ಲ, ನಾನು ಸಿಟ್ಟಿಗೇಳುವುದಿಲ್ಲ, ನಾನು ನನ್ನ ಕೆಲಸಕಾರ್ಯಗಳನ್ನು ಪ್ರಾಮಾಣಿಕತೆಯಿಂದ ಮಾಡುತ್ತೇನೆ, ನಾನು ಎಲ್ಲ ಜೀವಿಗಳಿಗೆ ಮತ್ತು ನಿರ್ಜೀವ ವಸ್ತುಗಳಿಗೆ ಪ್ರೀತಿ ಮತ್ತು ಗೌರವವನ್ನು ತೋರಿಸುತ್ತೇನೆ**. **ನಾನು ಎಲ್ಲದಕ್ಕೂ ಕೃತಜ್ಞನಾಗಿದ್ದೇನೆ**. **ನಾನು ಮುಖದಲ್ಲಿ ಸದಾ ಮಂದಹಾಸವನ್ನು ತುಂಬಿಕೊಂಡಿರುತ್ತೇನೆ**. **ನಾನು ಸಂತೋಷವಾಗಿದ್ದೇನೆ, ನಾನೇ ಸಂತೋಷ**. | **ಮೌಲ್ಯ**–ಸಹಕಾರ, ಗಮನವನ್ನು ಕೇಂದ್ರೀಕರಿಸುವುದು, ಒಳ್ಳೆಯ ಆಲೋಚನೆ ಮತ್ತು ಕ್ರಿಯೆ. **ಪ್ರಕ್ರಿಯೆ**–ಚಪ್ಪಾಳೆ ಮತ್ತು ಹೆಜ್ಜೆ ಕುಟ್ಟು, ಶಿಸ್ತು. **ಕೆಲಸ**–ಸ್ಥಳವನ್ನು ಸ್ವಚ್ಛಗೊಳಿಸಿ, ಎಲ್ಲ ಮಕ್ಕಳನ್ನೂ ಸೇರಿಸಿ ವರ್ತುಲವನ್ನು ನಿರ್ಮಿಸಿ. **ನ್ಯಾಯ**–ಹೆಣ್ಣು ಮತ್ತು ಗಂಡುಮಕ್ಕಳನ್ನು ಒಬ್ಬರಾದ ಮೇಲೊಬ್ಬರಂತೆ ನಿಲ್ಲಿಸುವುದು. **ಕಲೆ**–ಅನುಕ್ರಮಣಿಕೆ ಮತ್ತು ಲಯ. **ಹೊಂದಿಕೊಳ್ಳುವಿಕೆ**–ಯಾವುದೇ ಭಾಷೆಯಲ್ಲಾದರೂ ಮಾಡಬಹುದು. ಯಾವುದೇ ಸಕಾರಾತ್ಮಕ ವಾಕ್ಯವನ್ನು ಬಳಸಬಹುದು. **ಶೈಕ್ಷಣಿಕ**–ಭಾಷೆ, ಉಚ್ಚಾರ, ಎಣಿಕೆ, ಸಮತೋಲನ. |
| **ಚರ್ಚೆ** ಶಿಕ್ಷಕರು ನಿರ್ದೇಶಿತ ಪ್ರಶ್ನೆಗಳನ್ನು ಕೇಳುವ ಮೂಲಕ ಚರ್ಚೆಗೆ ಮಾರ್ಗದರ್ಶನ ಮಾಡುತ್ತಾರೆ. | ಅವರ ಸುತ್ತಮುತ್ತಲಿನ ಪರಿಸರದಲ್ಲಿ ಯಾವಯಾವ ವಸ್ತುಗಳನ್ನು ಮರದಿಂದ ಮಾಡಲಾಗಿದೆ: (ಮೇಜು, ಕುರ್ಚಿ, ಇತ್ಯಾದಿ. ಕಾಗದ, ಪೆನ್ಸಿಲ್, ಬರೆಯುವ ಒತ್ತಿಗೆ ಹಲಗೆ, ಡೆಸ್ಕ್‌ಗಳು, ಕಪ್ಪುಹಲಗೆ, ಸೂಚನಾ ಫಲಕ, ಬಾಗಿಲುಗಳು, ಕಿಟಕಿಗಳು, ಛಾವಣಿ ಇತ್ಯಾದಿ.) ಈ ವಸ್ತುಗಳನ್ನು ಮರದಿಂದ ಏಕೆ ಮಾಡಲಾಗಿದೆ? ಅದಕ್ಕೆ ಬದಲಾಗಿ ಬೇರೆ ಯಾವ ಸಾಮಗ್ರಿಯನ್ನು ಉಪಯೋಗಿಸಬಹುದು? ನಮ್ಮ ಆಹಾರವು ಎಲ್ಲಿಂದ ಬರುತ್ತದೆ? ಯಾರು ಯಾರು ಏನನ್ನು ತಿನ್ನುತ್ತಾರೆ? ಸಾಂದ್ರತೆಗೆ ಸಂಬಂಧಿಸಿದಂತೆ ಮರದ ಗುಣಲಕ್ಷಣಗಳು, ಒಣ ಮತ್ತು ಹಸಿ ಮರಗಳನ್ನು ಬಳಸಿ, ತೇಲು ಅಥವಾ ಮುಳುಗು ಪ್ರಯೋಗ ಇತರ ಕ್ರಿಯೆಗಳು: ಗಾಳಿಯ | ಅದೇ ಚರ್ಚೆಯು ಬೇರೆ ಬೇರೆ ರೀತಿಯ ಸಂಭಾಷಣೆಗೆ ದಾರಿ ಮಾಡಿಕೊಡುತ್ತದೆ ಮತ್ತು ಮಕ್ಕಳು ಒಬ್ಬರಿಂದೊಬ್ಬರು ಕಲಿಯುತ್ತಾರೆ. ತರಗತಿಯ ಒಳಗೇ ಜ್ಞಾನದ ನೆಲೆಯನ್ನು ಕಾಣಲು ಸಾಧ್ಯ. ಮಕ್ಕಳಿಗೆ ಗೆಳೆಯರಿಂದ ಕಲಿಯುವುದು ಸುಲಭವಾಗುತ್ತದೆ. ಮರದ ವಾಹಕತೆಯ (Conductivity) ಗುಣಲಕ್ಷಣಗಳನ್ನು ಕುರಿತಾದ ಚರ್ಚೆಯನ್ನು ಮುಂದುವರೆಸಿ. ಮರವು ಒಂದು ನವೀಕರಿಸಬಹುದಾದ ಇಂಧನ ಶಕ್ತಿ. ಮರದ ಇನ್ನಿತರ ಕಾರ್ಯಗಳು: ಇನ್ನಿತರ ಜೀವಿಗಳಿಗೆ | ಸಂಸ್ಕರಿತ ಮರದ ಮೇಲೆ ಹೆಚ್ಚಿನ ಚರ್ಚೆ ಮತ್ತು ಸೃಜನಶೀಲರಾಗುವುದರ ಮತ್ತು ತ್ಯಾಜ್ಯ ಮರಗಳನ್ನು ಬಳಸುವುದರಿಂದ ಆಗುವ ಲಾಭಗಳು. ಮರದ ಇತರ ಸ್ವರೂಪಗಳಾದ ಪಳೆಯುಳಿಕೆ ಇಂಧನ ಮತ್ತು ಇಂಧನ ಬಿಲ್ಲೆಗಳು(briquettes) | ಇತರರ ಮಾತನ್ನು ಆಲಿಸುವುದು ಮತ್ತು ಇತರರ ದೃಷ್ಟಿಕೋನವನ್ನು ಗೌರವಿಸುವುದನ್ನು ಕಲಿಯುವುದು. ಯಾವುದೇ ಅಳುಕಿಲ್ಲದೇ ತಮ್ಮ ವಿಚಾರಗಳನ್ನು ವ್ಯಕ್ತಪಡಿಸುವುದು ಮತ್ತು ಟೀಕೆ–ಟಿಪ್ಪಣಿಗಳನ್ನು ಸಕಾರಾತ್ಮಕವಾಗಿ ತೆಗೆದುಕೊಳ್ಳುವುದನ್ನು ಕಲಿಯುವುದು, ತಮ್ಮ ತಪ್ಪುಗಳಿಂದ ಕಲಿಯುವುದು. ವಿಶ್ಲೇಷಿಸುವುದು, ಚಿಂತನೆ ಮಾಡುವುದು, ಕೆಲವು ತೀರ್ಮಾನಗಳಿಗೆ ಬರುವಾಗ ಲಕ್ಷವಿಟ್ಟು ಗಮನ ನೀಡಿದ ನಂತರ ತರ್ಕವನ್ನು ಉಪಯೋಗಿಸುವುದು. ಸಹಕಾರ, ಇತರರನ್ನು ಪರಿಗಣಿಸುವುದು, |

| ಮರಗೆಲಸ ಮತ್ತು ಸಮಕಾಲೀನ ಶಿಕ್ಷಣದಲ್ಲಿ ಅದರ ಪಾತ್ರ | | | | |
|---|---|---|---|---|
| **ಚಟುವಟಿಕೆ** | **ವಯೋಮಾನ ಗುಂಪು / ತರಗತಿ 5–8 ವರ್ಷಗಳು** | **ವಯೋಮಾನ ಗುಂಪು / ತರಗತಿ 8–11 ವರ್ಷಗಳು** | **ವಯೋಮಾನ ಗುಂಪು / ತರಗತಿ 11–14 ವರ್ಷಗಳು** | **ಬೆಳೆಸಲಾದ ಗುಣಗಳು** |
| | ಶುದ್ಧೀಕರಣ, ನೆರಳು, ಇತರ ಜೀವಿಗಳಿಗೆ ಆವಾಸಸ್ಥಾನ, ಆಹಾರ ಸರಪಳಿಯಲ್ಲಿ ಮೊದಲ ಹಂತ ಇತ್ಯಾದಿ. | ಆವಾಸಸ್ಥಾನವನ್ನು ಒದಗಿಸುವುದು, ಜೀವವೈವಿಧ್ಯತೆಯ ಅಗತ್ಯಕ್ಕೆ ಇರುವ ಕಾರಣಗಳು. | | ಸ್ವಯಂಶಿಸ್ತು, ಸ್ವ–ಮೌಲ್ಯ ಮಾಪನ, ಸ್ವ–ದೃಢೀಕರಣ. |
| ಮನದಟ್ಟು ಮಾಡಿಕೊಡಬೇಕಾದ ಪರಿಕಲ್ಪನೆಗಳು | ವಿವಿಧ ವಸ್ತು–ಸಾಮಗ್ರಿಗಳನ್ನು, ಅವುಗಳ ಉಪಯುಕ್ತತೆಯನ್ನು, ಗುಣಲಕ್ಷಣ ಹಾಗೂ ಸಾಧ್ಯತೆಗಳನ್ನು ಗಮನಿಸುವುದನ್ನು ಕಲಿಯುವುದು. ಇನ್ನಿತರ ವಸ್ತು ಸಾಮಗ್ರಿಗಳನ್ನು ಮತ್ತು ಅವುಗಳ ಮೂಲವನ್ನು ಪಟ್ಟಿ ಮಾಡಿ– ಅಲ್ಯುಮಿನಿಯಮ್, ಕಬ್ಬಿಣ, ತಾಮ್ರ, ಉಕ್ಕು, ಬಟ್ಟೆ, ಹಿತ್ತಾಳೆ.<br>ಪ್ರತಿಯೊಂದು ಸಾಮಗ್ರಿಯಿಂದಲೂ ಅದರ ಸುತ್ತಮುತ್ತಲು ತಯಾರಿಸುವ ವಸ್ತುಗಳನ್ನು ಪಟ್ಟಿ ಮಾಡಿ. ವಸ್ತುಗಳನ್ನು ಉಪಯೋಗಿಸುವ ಮುನ್ನ ಅವುಗಳನ್ನು ಸಂಸ್ಕರಿಸಲಾಗುತ್ತದೆ ಎಂಬುದನ್ನು ತಿಳಿಯಿರಿ. ಎಲ್ಲಾ ಕಚ್ಚಾ ವಸ್ತುಗಳಿಗೂ ಭೂಮಿಯೊಂದೇ ಮೂಲ ಎಂಬ ಸತ್ಯ ಸಂಗತಿಯ ಕುರಿತು ಗಮನ ಸೆಳೆಯಿರಿ. | ವಸ್ತುಗಳತ್ತ ಗಮನ ಸೆಳೆಯಿರಿ. ಅವು ಯಾವ ಮೂಲವಸ್ತುವಿನಿಂದ ಮಾಡಲ್ಪಟ್ಟಿವೆ ಎಂಬುದನ್ನು ಕೇಳಿ. ಉದಾ: ಪಾತ್ರೆಗಳು, ಕಪಾಟು, ಪೀಠೋಪಕರಣ, ಚಾಪೆ, ಬಟ್ಟೆಗಳು, ಮನೆಗಳು, ಉಪಕರಣಗಳು, ವಿದ್ಯುತ್ ತಂತಿ ಇತ್ಯಾದಿ.<br>ಅವು ಆ ಮೂಲ ವಸ್ತುಗಳಿಂದಲೇ ಏಕೆ ಮಾಡಲ್ಪಟ್ಟಿವೆ, ಬೇರೆ ಯಾವುದರಿಂದಲೂ ಏಕಿಲ್ಲ, ಕಚ್ಚಾ ವಸ್ತುಗಳನ್ನು ಉಪಯೋಗಿಸಿ ಏನನ್ನಾದರೂ ತಯಾರಿಸುವ ಮೊದಲು ಪರಿಗಣಿಸಬೇಕಾದ ಮಾನದಂಡಗಳಾವುವು. | ಮೂಲ ಅಥವಾ ಕಚ್ಚಾ ವಸ್ತುಗಳನ್ನು ವಿವೇಚನಾರಹಿತವಾಗಿ ಉಪಯೋಗಿಸಿದ್ದರಿಂದ ಆದ ಪರಿಣಾಮವನ್ನು ಚರ್ಚಿಸಿ. ಹೇಗೆ ಪಾರಂಪರಿಕ ಅಥವಾ ಸಾಂಪ್ರದಾಯಿಕ ವಸ್ತುಗಳ ಸ್ಥಾನವನ್ನು ಕೊಳೆತು ನಾಶವಾಗದ ಪ್ಲಾಸ್ಟಿಕ್ ವಸ್ತುಗಳು ಆಕ್ರಮಿಸಿವೆ. ಕಾಡನ್ನು ನಾಶ ಮಾಡದೆ, ಮರವನ್ನು ಒಂದು ನವೀಕರಿಸಬಹುದಾದ ಸಂಪನ್ಮೂಲವಾಗಿ ಬಳಸುವ ಸಾಧ್ಯತೆಯನ್ನು ಕುರಿತು ಚರ್ಚಿಸಿರಿ. ಕೃಷಿ ಅರಣ್ಯೋದ್ಯಮ ಮತ್ತು ಮರದ ಇನ್ನಿತರ ಸಂಸ್ಕರಿತ ಪರ್ಯಾಯಗಳಾದ ಪ್ಲೈವುಡ್, ಪಾರ್ಟಿಕಲ್ ಬೋರ್ಡು,ಹಾರ್ಡ್ ಬೋರ್ಡು ಮತ್ತು ನ್ಯೂವುಡ್ ಕುರಿತು ಮಾತನಾಡಿ. ಮರದ ಸಂರಕ್ಷಣೆ. ಸೊಟ್ಟದಾಗುವುದು, ಸೀಳುವುದು, ಬಾಗಿಸುವ ಪರಿಣಾಮಗಳು. ಗೆದ್ದಲು ದಾಳಿ, ಕುಟ್ಟೆಹುಳುವಿನಿಂದಾಗುವ ಹಾನಿ ಇತ್ಯಾದಿಗಳ ಪರಿಣಾಮ. | ಪರಸ್ಪರ ಸಂಬಂಧವನ್ನು ಸ್ಥಾಪಿಸುವುದು, ಬಳಸಿಬಿಸಾಡುವ ಇಂದಿನ ಪ್ರವೃತ್ತಿಯ ಬದಲಾಗಿ ಪೋಲು ಮಾಡುವುದನ್ನು ಕಡಿಮೆ ಮಾಡುವುದರ, ವಸ್ತುಗಳ ಮರುಬಳಕೆಯ, ವಸ್ತುಗಳ ದೀರ್ಘಬಾಳಿಕೆಯ ಉದ್ದೇಶದಿಂದ ಗುಣಮಟ್ಟವನ್ನು ಹೆಚ್ಚಿಸುವುದರ ಅಗತ್ಯವನ್ನು ತಿಳಿಯುವುದು |
| ಕತೆ ಹೇಳುವುದು | **ಮರಗಳಿಗೆ ಭಾವನೆಗಳಿದ್ದರೆ, ಅವುಗಳಿಗೆ ಮಾತು ಬರುತ್ತಿದ್ದರೆ** ಏನಾಗುತ್ತಿತ್ತು ಎಂಬುದನ್ನು ಕುರಿತು ಕತೆಯೊಂದನ್ನು ಹೆಣೆದು ಹೇಳಿ.ನೀರಿನ, ಬಿಸಿಲಿನ, ಗಾಳಿಯ ಮತ್ತು ತಮ್ಮನ್ನು ಕುರಿತು ಕಾಳಜಿ ತೆಗೆದುಕೊಳ್ಳುವ ಸ್ನೇಹಿತರ ಅವಶ್ಯಕತೆ ಅವುಗಳಿಗಿರುವುದನ್ನು ತಿಳಿಸಿ. | "ದ ಲೊರಾಕ್ಸ್"ದಂತಹ ಅನಿಮೇಟೆಡ್ ಚಲನಚಿತ್ರಗಳನ್ನು ತೋರಿಸಿ. ಇದು **ಮರಗಳೇ ಇಲ್ಲದ ಒಂದು ನಗರವನ್ನು** ಕುರಿತ ಚಿತ್ರ. ಅದಕ್ಕೆ ಅಂತಹ ಪರಿಸ್ಥಿತಿ ಏಕೆ ಬಂದೊದಗಿತು, ಹೇಗೆ ಒಬ್ಬ ಬಾಲಕ ಅಲ್ಲಿ ಮರಗಳನ್ನು ಮತ್ತೆ ಬೆಳೆಸುವ ನಿರ್ಣಯ ಮಾಡುತ್ತಾನೆ ಎನ್ನುವುದನ್ನು ಕುರಿತದ್ದಾಗಿದೆ. | ಮರಗಳನ್ನು ಉಳಿಸುವುದಕ್ಕಾಗಿ ನಡೆದ ಚಿಪ್ಕೋ ಆಂದೋಲನದ ಕತೆಯನ್ನು ಹೇಳಿ. ಆಧುನಿಕ ಚಿಪ್ಕೋ ಆಂದೋಲನವು 1970 ರ ದಶಕದಲ್ಲಿ ಉತ್ತರಾಖಂಡ್‌ನ ಘರವಾಲ್ ಹಿಮಾಲಯದಲ್ಲಿ ಶ್ರೀ ಬಹುಗುಣ ಅವರಿಂದ ಆರಂಭವಾಯಿತು. ನಂತರ ತೀವ್ರ ಅರಣ್ಯನಾಶವನ್ನು ಕುರಿತು ಜಾಗೃತಿ ಮೂಡಿಸುವ ಮೂಲಕ ಉತ್ತರಪ್ರದೇಶದಲ್ಲಿಯೂ ಚಾಲನೆ ಪಡೆಯಿತು. | ಮರಗಳ ಮಹತ್ವವನ್ನು ತಿಳಿಯುವುದು. ಮರಗಳು ಯಾವುದರಿಂದ ಆಗುತ್ತವೆ– ಇಂಗಾಲ ಚಕ್ರವನ್ನು ಕುರಿತು ಕಲಿಯುವುದು. ಸಸ್ಯ ಸಂಕುಲವನ್ನು ಕುರಿತು ತಿಳಿಯುವುದು ಮತ್ತು ಪರಾನುಭೂತಿ ಬೆಳಸಿಕೊಳ್ಳುವುದು. |

| ಮರಗೆಲಸ ಮತ್ತು ಸಮಕಾಲೀನ ಶಿಕ್ಷಣದಲ್ಲಿ ಅದರ ಪಾತ್ರ | | | | |
|---|---|---|---|---|
| **ಚಟುವಟಿಕೆ** | **ವಯೋಮಾನ ಗುಂಪು / ತರಗತಿ 5–8 ವರ್ಷಗಳು** | **ವಯೋಮಾನ ಗುಂಪು / ತರಗತಿ 8–11 ವರ್ಷಗಳು** | **ವಯೋಮಾನ ಗುಂಪು / ತರಗತಿ 11–14 ವರ್ಷಗಳು** | **ಬೆಳೆಸಲಾದ ಗುಣಗಳು** |
| ಕ್ಷೇತ್ರ ಸಂದರ್ಶನ: ಹತ್ತಿರದ ತೋಟ/ ಕಾಡು /ವನ /ಸಾಲುಮರಗಳು ಚಟುವಟಿಕೆಗಳು | ಎಲೆ, ಹೂವು, ಬೀಜಗಳ ಸಂಗ್ರಹಣೆ. **(ಮರದ ಜೊತೆ ಮಾತನಾಡಿ, ಅದರ ಒಪ್ಪಿಗೆಯನ್ನು ಕೇಳಿಪಡೆದು, ಅಪ್ಪುಗೆ ಅಥವಾ ಮುತ್ತಿಡುವುದರ ಮೂಲಕ ಅದಕ್ಕೆ ಕೃತಜ್ಞತೆಯನ್ನು ಅರ್ಪಿಸಿದ ಬಳಿಕ)** ತೊಗಟೆಯ ಮೇಲೆ ಉಜ್ಜಿ ತೆಗೆದ ಚಿತ್ರ, ಬಣ್ಣದ ಕಡ್ಡಿ (ಕ್ರಯಾನು) ಗಳನ್ನು ಬಳಸಿ ತೆಗೆದ ಎಲೆಗಳ ಅಚ್ಚು. ಅವರಿಗಿಷ್ಟವಾದ ಯಾವುದೇ ವಸ್ತುವಿನ ಚಿತ್ರ ಬಿಡಿಸುವುದು– ಜೀವನ ರೇಖಾ ಚಿತ್ರ. | ಕಾಡಿನಲ್ಲಿ ಇರುವ ವಿವಿಧ ತರಹದ ಸಸ್ಯಗಳನ್ನು ಮತ್ತು ವಿವಿಧ ಸ್ತರದ ಸಸ್ಯ ಜೀವನವನ್ನು ಗಮನಿಸುವುದು. ತಾವು ನೋಡಿದ ಹಾಗೆ ಎಲೆಯ, ಬೇರಿನ ವ್ಯೂಹದ, ಚಿಕ್ಕ ಸಸ್ಯಗಳ, ಹೂವುಗಳ ಮತ್ತು ಅವುಗಳ ಭಾಗಗಳ ಚಿತ್ರವನ್ನು ಬರೆಯುವುದು. | ಮೌನ ಧ್ಯಾನ. ಸಸ್ಯಗಳ, ಹೂವು ಅಥವಾ ಮರಗಳ ಭಾಗಗಳ ಚಿತ್ರ ಬರೆಯುವುದು ಮತ್ತು ನಂತರ ದೂರದಿಂದ ನೋಡಿದಾಗ ಕಾಣುವ ರೀತಿಯಲ್ಲಿ ಇಡೀ ಮರದ ಆಕಾರವನ್ನು ಚಿತ್ರಿಸುವುದು. | ಪ್ರತಿಯೊಂದು ವಸ್ತುವೂ ಹೇಗೆ ಸೃಷ್ಟಿಯಾಗಿದೆ ಎಂಬ ಬೆರಗನ್ನು ಹುಟ್ಟಿಸುವುದರ ಮೂಲಕ ಮಗುವಿನ ಭಾವನಾತ್ಮಕ ಜಗತ್ತನ್ನು ಸಮೃದ್ಧಗೊಳಿಸುವುದು.<br>ಪರಿಸರ ಮತ್ತು ಭೂಮಿತಾಯಿಯನ್ನು ಕುರಿತು ಗೌರವಾದರಗಳನ್ನು ಬೆಳೆಸುವುದು. |
| ಪರಿಚಯಿಸಿದ ಪರಿಕಲ್ಪನೆಗಳು | ಸಸ್ಯಗಳ ಉಪಯೋಗ, ಸಸ್ಯಗಳ ಭಾಗಗಳ ಹೆಸರು ಮತ್ತು ಅವುಗಳ ಕಾರ್ಯ. ತರಕಾರಿ, ಹಣ್ಣುಗಳ ಹೆಸರುಗಳು. ಅಡುಗೆಗೆ ಬಳಸುವ ಮಸಾಲೆ ಸಾಮಾನುಗಳ ಹೆಸರು. ಸರಳ ಹಾಗೂ ದಿನನಿತ್ಯ ಉಪಯೋಗಿಸುವ ಔಷಧ ಸಸ್ಯಗಳ ಹೆಸರು ಮತ್ತು ಅವುಗಳ ಉಪಯೋಗ (ಮಕ್ಕಳು ತಮ್ಮ ತಂದೆತಾಯಿಯರೊಡನೆ ಮಾತನಾಡಿ, ಹಿಮ್ಮಾಹಿತಿ ನೀಡಬೇಕು) ವಿವಿಧ ರೀತಿಯ ಎಲೆಗಳ, ಬೀಜಗಳ, ಬೇರುಗಳ ನಡುವಿನ ವ್ಯತ್ಯಾಸವನ್ನು ಅರಿಯುವುದು. | ಗಿಡಮರಗಳ ಕಾರ್ಯ– ಜೀವವೈವಿಧ್ಯತೆ. ಸಸ್ಯಗಳಿಗಿರುವ ಅಗತ್ಯಗಳು ಅವುಗಳನ್ನು ಸಸ್ಯಗಳು ಹೇಗೆ ಪೂರೈಸಿಕೊಳ್ಳುತ್ತವೆ ಹೇಗೆ ಇಡೀ ಜೀವಸಂಕುಲವು ಗಾಳಿಯ ಒಂದು ಘಟಕಭಾಗವಾದ ಇಂಗಾಲದ ಡೈಆಕ್ಸೈಡ್ ನಿಂದ ಮಾಡಲ್ಪಟ್ಟಿದೆ ಎಂಬ ಬೆರಗು. ಆಹಾರ ಸರಪಳಿಯಲ್ಲಿ ಸಸ್ಯಗಳು ಹೇಗೆ ಮೊದಲ ಹಂತವಾಗಿವೆ. ಮೊಳಕೆಯೊಡೆದ ಬೀಜವೊಂದರ ಎಲೆಯನ್ನು ಗಮನಿಸುವುದರಿಂದ ಅದು ದ್ವಿದಳಸಸ್ಯವೇ ಅಥವಾ ಏಕದಳಸಸ್ಯವೇ ಎಂಬುದನ್ನು ಗುರುತಿಸುವುದು. | ಜಗತ್ತಿನ ವಿವಿಧ ಹವಾಮಾನ ಪ್ರದೇಶಗಳು– ಮರುಭೂಮಿ, ಹುಲ್ಲುಗಾವಲು, ಉಷ್ಣವಲಯದ ಕಾಡು, ಸದಾಹಸಿರು ಕಾಡುಗಳು. ಸಸ್ಯಸಂಕುಲವು ಹೇಗೆ ಹವಾಮಾನ ಪರಿಸ್ಥಿತಿಯನ್ನು ಅವಲಂಬಿಸಿದೆ ಮತ್ತು ಪ್ರಾಣಿಸಂಕುಲವು ಹೇಗೆ ಸಸ್ಯಸಂಕುಲವನ್ನು ಅವಲಂಬಿಸಿದೆ. ಅರಣ್ಯನಾಶ ಅದರ ಕಾರಣಗಳು. ಕಾಡನ್ನು ಕಡಿಯುವುದರ ಬದಲಾಗಿ ಮರದದಿಮ್ಮಿಗಳಿಗಾಗಿ ನೆಡುತೋಪುಗಳನ್ನು ಬೆಳೆಸುವುದು–ಕೃಷಿ ಅರಣ್ಯ. | ಇನ್ನಿತರ ಜೀವಿಗಳ ಕುರಿತಾಗಿ ಬೆಳೆಸಿಕೊಳ್ಳಬೇಕಾದ ಪರಾನುಭೂತಿಯ ಮೇಲೆ ಒತ್ತು ನೀಡುವುದು. **ಪುಸ್ತಕಗಳಿಂದ ಮಾಹಿತಿ ಸಂಗ್ರಹಿಸುವುದಕ್ಕಿಂತಲೂ ಮಕ್ಕಳಿಗೆ ತಾವೇ ಗಮನಿಸಿ ಮಾಹಿತಿಯನ್ನು ತಯಾರಿಸುವ ಶಕ್ತಿಯನ್ನು ತುಂಬುವುದು.** ವಿಷಯದ ಕಲಿಕೆಯಲ್ಲಿ ವಿಷಯವನ್ನು ಪ್ರತ್ಯೇಕಗೊಳಿಸುವುದಕ್ಕಿಂತಲೂ ಜ್ಞಾನವನ್ನು ಸಂಗ್ರಹಿಸುವ ಮತ್ತು ಒಂದರೊಡನೊಂದು ಒಟ್ಟುಗೂಡಿಸುವ ಪ್ರಕ್ರಿಯೆಗೆ ಮತ್ತು ಸ್ವಾವಲಂಬನೆಗೆ ಮಹತ್ವ ನೀಡುವುದು. |
| ಕ್ಷೇತ್ರ ಸಂದರ್ಶನದ ಆಧಾರದ ಮೇಲೆ ತರಗತಿ ಕೋಣೆಯಲ್ಲಿ ಚಟುವಟಿಕೆಗಳು | ಸಂಗ್ರಹಿಸಿದ ವಸ್ತುಗಳನ್ನು ಗಾತ್ರ, ಬಣ್ಣ, ಸ್ಪರ್ಶಸಂವೇದನೆ ಪರಿಮಾಣಕ್ಕೆ ಅನುಗುಣವಾಗಿ ವಿಂಗಡಿಸುವುದು. ವಿವಿಧ ವರ್ಗೀಕರಣಗಳನ್ನು ಎಣಿಸುವುದು. ಮನಸ್ಸಿಗೆ ತೋರಿದ ಹಾಗೆ ಬಣ್ಣದ ಅಚ್ಚುಗಳನ್ನು ಚಿತ್ರಿಸುವುದು. ರೇಖಾಚಿತ್ರ ಬರೆಯುವುದು ಮರಗಳಿಂದ ನಮಗೆ ಮತ್ತು ನಮ್ಮ ಸುತ್ತಲೂ ಇರುವ ಇನ್ನಿತರ ಜೀವಿಗಳಿಗೆ ಆಗುವ ಉಪಯೋಗವನ್ನು ಚಿತ್ರದ ಮೂಲಕ ಅಭಿವ್ಯಕ್ತಿಸುವುದು. ಬಣ್ಣದ ಕಡ್ಡಿಗಳಿಂದ ಬಣ್ಣ | ಸಂಗ್ರಹಿಸಲಾದ ಸಸ್ಯಗಳನ್ನು ಸಮಾನ ವಯಸ್ಸಿನ ಗೆಳೆಯರ, ಪಾಲಕರ ಹಾಗೂ ಶಿಕ್ಷಕರ ನೆರವಿನಿಂದ ಗುರುತಿಸುವುದು. ಅವುಗಳ ಉಪಯೋಗಗಳನ್ನು ಪಟ್ಟಿಮಾಡುವುದು. ಸಂಗ್ರಹಿಸಿದ ಸಸ್ಯಗಳನ್ನು ಒಣಗಿಸಿ ತರಗತಿಯಲ್ಲಿಯೇ ಸಂಗ್ರಹಾಲಯವನ್ನು (ಹರ್ಬೇರಿಯಂ) ನಿರ್ಮಿಸುವುದು. ವಿವಿಧ ತರಹದ ಸಸ್ಯಗಳು | ತಮಗೆ ಏನು ಅನ್ನಿಸಿತು ಎನ್ನುವುದನ್ನು ಬರವಣಿಗೆಯಲ್ಲಿ ತೋರಿಸುವುದು. ಕಾಡಿಗೆ ಭೇಟಿ ನೀಡಿದ ಬಗ್ಗೆ ಕಾಮಿಕ್ ಚಿತ್ರಗಳನ್ನು ಬರೆಯಲು ನಿರ್ಧರಿಸುವುದು. ಮರಗಳು ಇರುವ ರೀತಿಯಲ್ಲಿ, ಅವು ಕವಲೊಡೆಯುವ ವಿಧಾನದಲ್ಲಿ ಅವುಗಳ ಸಂರಚನೆಯನ್ನು ತಿಳಿದುಕೊಳ್ಳುವುದು ಮತ್ತು ಮರದ ಸಮತೋಲನವನ್ನು ಅರ್ಥ ಮಾಡಿಕೊಳ್ಳುವುದು. ಮರ ಅಥವಾ ಗಿಡ ಸಮತೋಲನವಾಗಿ ನಿಲ್ಲುವ | ಎಲೆ ಮತ್ತು ಬೀಜಗಳನ್ನು ಉಪಯೋಗಿಸಿ ವರ್ಗೀಕರಣ ಮತ್ತು ಎಣಿಕೆಯನ್ನು ಕಲಿಯುವುದು. ಆಲೋಚನೆ, ವಿಚಾರಗಳನ್ನು ಚಿತ್ರಗಳ ಮೂಲಕ ವ್ಯಕ್ತಪಡಿಸುವುದು. ಗಿಡಮರಗಳ ವರ್ಗೀಕರಣ, ಅವುಗಳ ಸಸ್ಯಶಾಸ್ತ್ರೀಯ ಹೆಸರುಗಳು, ಸಾಮಾನ್ಯ ಹೆಸರುಗಳು, ಸಸ್ಯಶಾಸ್ತ್ರೀಯ ರೀತಿಯಲ್ಲಿ ಹೆಸರಿಸುವ ಪದ್ಧತಿಯ ಅಗತ್ಯಕ್ಕೆ ಕಾರಣಗಳು, |

| ಮರಗೆಲಸ ಮತ್ತು ಸಮಕಾಲೀನ ಶಿಕ್ಷಣದಲ್ಲಿ ಅದರ ಪಾತ್ರ | | | | |
|---|---|---|---|---|
| **ಚಟುವಟಿಕೆ** | **ವಯೋಮಾನ ಗುಂಪು / ತರಗತಿ 5–8 ವರ್ಷಗಳು** | **ವಯೋಮಾನ ಗುಂಪು / ತರಗತಿ 8–11 ವರ್ಷಗಳು** | **ವಯೋಮಾನ ಗುಂಪು / ತರಗತಿ 11–14 ವರ್ಷಗಳು** | **ಬೆಳೆಸಲಾದ ಗುಣಗಳು** |
| | ತುಂಬುವುದು. | ಮತ್ತು ಅವುಗಳ ಉಪಯೋಗಗಳನ್ನುಳ್ಳ ಕೋಷ್ಠಕವನ್ನು ತಯಾರಿಸುವುದು. ವಿವಿಧ ರೀತಿಯ ಮರ ಮಟ್ಟು ಕೊಡುವ ಸಸ್ಯ ಜಾತಿಗಳನ್ನು ಗುರುತಿಸಲು ಪ್ರಯತ್ನಿಸುವುದು. ಆಯ್ಕೆ ಮಾಡಿಕೊಂಡ ಒಂದು ಮರ ಅಥವಾ ಗಿಡವನ್ನು ಕುರಿತು ಪದ್ಯವೊಂದನ್ನು ರಚಿಸುವುದು. ಭೇಟಿಯ ಅನುಭವ, ಅಲ್ಲಿ ಏನೇನು ನೋಡಿದರು ಮುಂತಾದವನ್ನು ಕುರಿತು ಬರೆಯುವುದು. | ಬಗ್ಗೆ ಗಮನವನ್ನು ಕೇಂದ್ರೀಕರಿಸುತ್ತ, ಎಲೆಗಳು ಎಲ್ಲಿ ಇವೆ, ರೆಂಬೆಕೊಂಬೆಗಳು ಹೇಗೆ ವ್ಯವಸ್ಥಿತವಾಗಿ ರಚನೆಯಾಗಿವೆ ಎನ್ನುವುದನ್ನು ಗಮನಿಸಿ, ಮೊದಲು ಎಲೆ, ನಂತರ ಒಂದು ರೆಂಬೆ, ಅನಂತರ ಮರದ ಇಡೀ ಆಕಾರವನ್ನು ಚಿತ್ರಿಸುವುದು. | ಸಸ್ಯಗಳ ಉಪಯೋಗಗಳನ್ನು ತಿಳಿದುಕೊಳ್ಳುವುದು. ಮಾಹಿತಿಗಳು ಸುಲಭವಾಗಿ ಸಿಗುವ ಹಾಗೆ ಅವುಗಳನ್ನು ಕೋಷ್ಠಕದಲ್ಲಿ ವ್ಯವಸ್ಥಿತವಾಗಿ ವರ್ಗೀಕರಿಸುವುದನ್ನು, ಜೋಡಿಸುವುದನ್ನು ಕಲಿಯುವುದು.ಭಾಷಾ ಕೌಶಲ್ಯ ಅಭಿವೃದ್ಧಿ, ಪದಗಳಲ್ಲಿ ವಿಚಾರಗಳ ಅಭಿವ್ಯಕ್ತಿ. ಪದ್ಯಬರೆಯಲು ಭಾಷೆಯನ್ನು ಬಳಸುವಾಗ ಸೃಜನಶೀಲತೆ, ವ್ಯಾಖ್ಯಾನಕ್ಕೆ ಮನಸ್ಸನ್ನು ಬಳಸದೇ ವಸ್ತುಗಳನ್ನು ನೋಡಿ ಅವು ಹೇಗಿವೆಯೋ ಹಾಗೆಯೇ ಬರೆಯಲು ಕಲಿಯುವುದು. ಇದು ಗಮನಿಸಿ ನೋಡುವ ಕೌಶಲ್ಯವನ್ನು ಸುಧಾರಿಸುತ್ತದೆ. ರೇಖಾಗಣಿತದ ಮೂಲಭೂತ ಅಂಶಗಳನ್ನು ಆಕೃತಿಗಳು ಮತ್ತು ಅವು ಸ್ಥಿರವಾಗಿನಿಲ್ಲುವುದನ್ನು ಅರ್ಥಮಾಡಿಕೊಳ್ಳುವುದು. |
| ಗಳಿಸುವ ಸಾಮರ್ಥ್ಯಗಳು | ಗಾತ್ರ, ಬಣ್ಣ, ಸ್ಪರ್ಶ ಸಂವೇದನೆ ಆಧಾರದ ಮೇಲೆ ವರ್ಗೀಕರಣ. ಎಣಿಕೆ, ದೊಡ್ಡ ಪ್ರಮಾಣದಲ್ಲಿ ಲೆಕ್ಕ ಮಾಡಲು ಹತ್ತರ ಲೆಕ್ಕದ ಪದ್ಧತಿಯನ್ನು ಬಳಸುವುದು. ವ್ಯತ್ಯಾಸಗಳನ್ನು ಗುರುತಿಸಲು ಎಲೆ ಮತ್ತು ಹೂವುಗಳಲ್ಲಿನ ವ್ಯತ್ಯಾಸಗಳನ್ನು ಗಮನಿಸುವುದು. ವಿವಿಧ ರೀತಿಯ ಎಲೆ, ಕಡ್ಡಿ ಮತ್ತು ಕಲ್ಲುಗಳನ್ನು ಉಪಯೋಗಿಸಿ ತೇಪೆಚಿತ್ರಗಳನ್ನು (ಕೊಲಾಜ್) ತಯಾರಿಸುವುದು. | ಕಾಡಿನಲ್ಲಿರುವ ಸಸ್ಯಗಳ ವಿವಿಧ ಸ್ತರಗಳು. ಸಸ್ಯಗಳ ಬಗೆಗಳು–ಹುಲ್ಲು, ಗಿಡಮೂಲಿಕೆಗಳು, ಪೊದೆಗಳು, ಮರಗಳು, ಮರದ ಮೇಲೆ ಬೆಳೆಯುವ ಸಸ್ಯಗಳು (ಎಪಿಫೈಟ್ಸ್), ಪರಾವಲಂಬಿ ಸಸ್ಯಗಳು. ಮರಗಳಲ್ಲಿನ ವಿವಿಧ ಬಗೆಗಳನ್ನು ಅವುಗಳ ಉಪಯೋಗಕ್ಕೆ ಅನುಗುಣವಾಗಿ ಅಂದರೆ, ಇಂಧನ, ಮರಮಟ್ಟು, ಔಷಧ, ಆಹಾರ ಮತ್ತು ಹಣ್ಣು, ಆವಾಸಸ್ಥಾನ ನೀಡುವ ಮರಗಳು (ಆಲದ ಮರ) ಇತ್ಯಾದಿ ಕೋಷ್ಠಕ ಮಾಡಿ. ಮರಗಿಡಗಳಿಗಿರುವ ಅಗತ್ಯಗಳು ಮತ್ತು ಅವು ಹೇಗೆ ಈ ಅಗತ್ಯಗಳನ್ನು ತಾವೇ ಪೂರೈಸಿಕೊಳ್ಳುತ್ತವೆ. | ಸಸ್ಯ ಮತ್ತು ಪ್ರಾಣಿ ಸಂಕುಲದ ಜೀವವೈವಿಧ್ಯ. ಜೀವಿ ಪರಿಸರ ವ್ಯವಸ್ಥೆಯಲ್ಲಿ ಸಸ್ಯಗಳ ಕಾರ್ಯ. ಪರಸ್ಪರ ಅವಲಂಬನೆ ಮತ್ತು ಸಂಯುಕ್ತ ಜೀವನ ಸಂಬಂಧಗಳು. ಶಕ್ತಿ ಮೂಲಗಳ ಸಂಶ್ಲೇಷಣೆ ಮತ್ತು ತನ್ಮೂಲಕ ಭೂಮಿಯ ಮೇಲಿನ ಎಲ್ಲ ಜೀವಿಗಳ ಬದುಕಿನ ಆಧಾರವಾಗುವುದು. ಕೋನಗಳ ಪರಿಕಲ್ಪನೆ, ನಿಸರ್ಗದಲ್ಲಿ ಹೇಗೆ ಲಘುಕೋನಗಳು ನಿರ್ಮಾಣವಾಗುತ್ತವೆ, ಹೇಗೆ ತ್ರಿಕೋನವು ಅತ್ಯಂತ ಬಲವಾದ ರೂಪ ಇತ್ಯಾದಿ. | ಆಕಾರವನ್ನು ನೋಡಿ ಮರಗಿಡ ಹಾಗೂ ಪೊದೆಗಳನ್ನು ಗುರುತಿಸಲು ಕಲಿಯುವುದು ಮತ್ತು ಔಷಧದ ರೂಪದಲ್ಲಿ ಅವುಗಳ ಉಪಯೋಗವನ್ನು ನೆನಪಿನಲ್ಲಿಟ್ಟುಕೊಳ್ಳುವುದು. ಪ್ರಕೃತಿಯಲ್ಲಿ ಜೀವವೈವಿಧ್ಯತೆಯ ಅವಶ್ಯಕತೆಯನ್ನು ಅರ್ಥಮಾಡಿಕೊಳ್ಳುವುದು ಮತ್ತು ಜೀವಿಪರಿಸರ ವ್ಯವಸ್ಥೆಯ ಸ್ವಾಸ್ಥ್ಯದ ಜೊತೆ ಅದು ಹೇಗೆ ಸಂಬಂಧ ಹೊಂದಿದೆ ಎಂಬುದನ್ನು ಅರಿತುಕೊಳ್ಳುವುದು. **ಪ್ರಕೃತಿಯನ್ನು ಕುರಿತಾಗಿ ಕೃತಜ್ಞತಾಭಾವ**. ಸಮತೋಲನ, ಬೇರಿನ ವ್ಯೂಹ, ಕವಲೊಡೆಯುವ ವಿಧಾನಗಳು, ಪರಾಗಸ್ಪರ್ಶ ಮತ್ತು ಎಲೆ, ಹೂವು ವಿನ್ಯಾಸ, ಮತ್ತು ಬೀಜ ಪ್ರಸರಣಕ್ಕಾಗಿ ಬೀಜಗಳ ವಿನ್ಯಾಸ. ಗಮನಿಸುವಿಕೆಯ |

| ಮರಗೆಲಸ ಮತ್ತು ಸಮಕಾಲೀನ ಶಿಕ್ಷಣದಲ್ಲಿ ಅದರ ಪಾತ್ರ | | | | |
|---|---|---|---|---|
| **ಚಟುವಟಿಕೆ** | **ವಯೋಮಾನ ಗುಂಪು / ತರಗತಿ 5–8 ವರ್ಷಗಳು** | **ವಯೋಮಾನ ಗುಂಪು / ತರಗತಿ 8–11 ವರ್ಷಗಳು** | **ವಯೋಮಾನ ಗುಂಪು / ತರಗತಿ 11–14 ವರ್ಷಗಳು** | **ಬೆಳೆಸಲಾದ ಗುಣಗಳು** |
| | | | | ಕೌಶಲ್ಯ. ಚಿತ್ರ ಬರೆಯುವ ಸಾಮರ್ಥ್ಯ, ಸ್ವ–ಅಭಿವ್ಯಕ್ತಿ ಮತ್ತು ಬಣ್ಣಗಳ ಹೆಸರುಗಳು. |
| ಪ್ರಾತ್ಯಕ್ಷಿಕೆ | ಮಕ್ಕಳು ಬಡಗಿಯು ಕೆಲಸ ಮಾಡುವುದನ್ನು ಗಮನಿಸುತ್ತಾರೆ. | ಮರಗೆಲಸ ಚೆನ್ನಾಗಿ ಮಾಡುವ ವ್ಯಕ್ತಿಯೊಬ್ಬನನ್ನು ಕಂಡುಹಿಡಿದು ಅವನನ್ನು ಶಾಲೆಗೆ ಬಂದು ತಮಗೋಸ್ಕರ ಏನನ್ನಾದರೂ ಮಾಡಿಕೊಡುವಂತೆ ಮಕ್ಕಳು ವಿನಂತಿಸಿಕೊಳ್ಳುತ್ತಾರೆ. ಈ ಪ್ರಕ್ರಿಯೆಯಲ್ಲಿ ಅವರು ಜನರೊಂದಿಗೆ ಮಾತನಾಡುತ್ತಾರೆ ಹಾಗೂ ಬಡಗಿಯನ್ನು ಹುಡುಕುತ್ತಾರೆ. | ಎಲ್ಲ ಮಕ್ಕಳು ಬಡಗಿಯು ಕೆಲಸ ಮಾಡುವುದನ್ನು ಗಮನಿಸುತ್ತಾರೆ ಮತ್ತು ಅವನೊ/ಳೊಡನೆ ಮಾತುಕತೆ ಆಡುತ್ತಾರೆ, ತಮಗೆ ಆಸಕ್ತಿಯಿರುವ ಸಂಗತಿಯನ್ನು ಕೇಳಿ ತಿಳಿಯುತ್ತಾರೆ. ಅವರು ಹೇಗೆ ಆ ಕರಕುಶಲ ಕಾರ್ಯವನ್ನು ಕಲಿತರು, ಆರ್ಥಿಕವಾಗಿ ಇದು ಅವರಿಗೆ ಎಷ್ಟು ಪ್ರಯೋಜನಕಾರಿಯಾಗಿದೆ ಎಂಬುದನ್ನು ತಿಳಿಯಲು ಪ್ರಯತ್ನಿಸುತ್ತಾರೆ. | ಬಡಗಿಯು ಕೆಲಸ ಮಾಡುವುದನ್ನು ಗಮನಿಸುವುದರ ಮೂಲಕ ವಿವಿಧ ಉಪಕರಣಗಳ ಉಪಯೋಗದ ಬಗ್ಗೆ ತಿಳಿಯುವುದು. ಪಾರಂಪರಿಕ ಕರಕುಶಲ ಕಾರ್ಯಗಳನ್ನು ಉತ್ತೇಜಿಸಬೇಕಾದ ಅಗತ್ಯವನ್ನು ತಿಳಿಯುವುದು ಸೌಂದರ್ಯಪ್ರಜ್ಞೆ ಅಥವಾ ಕಲಾಪ್ರಜ್ಞೆಯನ್ನು ಮತ್ತು ಸೃಜನಶೀಲತೆಯನ್ನು ಬೆಳೆಸುವುದು. |
| ಕ್ಷೇತ್ರ ಸಂದರ್ಶನ: ಬಡಗಿಯೊಡನೆ ಸ್ಥಳೀಯ ಸಾಮಿಲ್‌ಗೆ ಭೇಟಿ | ಈ ವಯೋಮಾನದ ಗುಂಪಿಗೆ ಅಗತ್ಯವಿಲ್ಲ. | ಅಡ್ಡ ಕೊಯ್ದ ಮರದ ಉಂಗುರಾಕೃತಿಗಳನ್ನು ಮತ್ತು ಅವುಗಳಿಂದ ಮರಗಳ ವಯಸ್ಸನ್ನು ಹೇಗೆ ತಿಳಿಯಲಾಗುತ್ತದೆ ಎಂಬುದನ್ನು ಗಮನಿಸುವುದು. | ಮರದ ದಿಮ್ಮಿಗಳಲ್ಲಿನ ವಿವಿಧ ಬಗೆಗಳು ಮತ್ತು ಅವುಗಳ ಮೂಲ. ಪ್ರತಿ ಘಟಕದ ಬೆಲೆ– ಮರವನ್ನು ಅಳೆಯುವ ಮಾಪನ ಘಟಕಗಳನ್ನು ತಿಳಿಯುವುದು. | ಸಸ್ಯಗಳ ಮೇಲೆ ಋತುಗಳ ಪರಿಣಾಮ ಮತ್ತು ಮರಗಳು ಸಮಯವನ್ನು ಹೇಗೆ ದಾಖಲಿಸುತ್ತವೆ ಎಂಬುದನ್ನು ಕುರಿತು ತಿಳಿದುಕೊಳ್ಳುವುದು. ವಾರ್ಷಿಕ, ದ್ವೈವಾರ್ಷಿಕ ಮತ್ತು ದೀರ್ಘಕಾಲೀನ ಸಸ್ಯಗಳು. |
| ಪರಿಕಲ್ಪನೆಗಳು | | ಮರದ ಉದ್ದಳತೆಯನ್ನು ಅಳೆಯುವ ಘಟಕ ದಿಮ್ಮಿಗಳ ಬೆಲೆ. ಸಾಮಿಲ್‌ನಲ್ಲಿ ಬರುವ ಕತ್ತರಿಸಿದ ಮರದ ತುಂಡುಗಳು ಮತ್ತು ಗರಗಸದ ಹೊಟ್ಟು ಇತ್ಯಾದಿ ತ್ಯಾಜ್ಯ ವಸ್ತುಗಳಿಂದ ಏನನ್ನು ಮಾಡಬಹುದು? ಮರಗಳ ಮಾಗಿಸುವಿಕೆ (ಕ್ಯೂರಿಂಗ್) ಮತ್ತು ಉಪಚಾರ. ವಿಶಿಷ್ಟ ಮರವಾಗಿ ಬಿದಿರು. ಬಿದಿರಿನ ಕರ್ಷಕ ಶಕ್ತಿಯು ಅದನ್ನು ಅತ್ಯಂತ ಬಹುಮುಖೀ ವಸ್ತುವನ್ನಾಗಿಸಿದೆ. ಗೆದ್ದಲು ಮತ್ತು ಕಾಂಡ ಕೊರೆಯುವ ಹುಳುಗಳಿಂದ ಇದನ್ನು ರಕ್ಷಣೆ ಮಾಡಿಕೊಂಡರೆ ಉಕ್ಕಿನ ಬದಲಾಗಿ | ಮರದ ಆಮದು ಮತ್ತು ರಫ್ತು (ಆಯಾತ ಮತ್ತು ನಿರ್ಯಾತ) ಅದರ ವೆಚ್ಚ ಮತ್ತು ಲಭ್ಯತೆಯ ಅರ್ಥ. ಸ್ಥಳೀಯವಾಗಿ ಲಭ್ಯವಿರುವ ದಿಮ್ಮಿಗಳ ವಿಧಗಳು ಮತ್ತು ಅವುಗಳ ನಿರ್ದಿಷ್ಟ ಉಪಯೋಗಗಳು. ಮಣ್ಣು ಮತ್ತು ಪ್ರಾಣಿಗಳ ಸಂಖ್ಯೆಯ ಮೇಲೆ ಅರಣ್ಯನಾಶದ ಪರಿಣಾಮ. ಕೃಷಿಯ ಮೇಲೆ ಅದು ಬೀರುವ ಪ್ರಭಾವ– ಮಾನವ ಮತ್ತು ಕಾಡುಪ್ರಾಣಿಗಳ ನಡುವಿನ ಸಂಘರ್ಷ. | ಚದರಡಿ ಮತ್ತು ಘನ ಅಡಿಗಳಲ್ಲಿ ಮರದ ಉದ್ದಳತೆಯನ್ನು ಲೆಕ್ಕ ಹಾಕುವುದು. ಪರಿಮಾಣದ (ಘನ ಅಳತೆ) ಪರಿಕಲ್ಪನೆ ಮತ್ತು ಅದನ್ನು ಹೇಗೆ ಅಳೆಯುವುದು. ಪರಿಮಾಣ ಅಥವಾ ಘನ ಅಳತೆಯನ್ನು ಕುರಿತು ಮತ್ತು ವಿವಿಧ ಘನ ಆಕಾರಗಳನ್ನು ಅದರ ಮೂಲಕ ಹೇಗೆ ಅಳೆಯುವುದು ಎಂಬುದನ್ನು ಕಲಿಯುವುದು. ಎಲ್‌ಸಿಎಮ್ (ಲಘುತಮ ಸಾಮಾನ್ಯ ಅಪವರ್ತ್ಯ) ಮತ್ತು ಎಚ್‌ಸಿಎಫ್ (ಮಹತ್ತಮ ಸಾಮಾನ್ಯ ಅಪವರ್ತನ) ಪರಿಕಲ್ಪನೆಗಳನ್ನು ಉಪಯೋಗಿಸಿ, ಕನಿಷ್ಠ ತ್ಯಾಜ್ಯವುಳಿಯುವ ಹಾಗೆ ಮರವನ್ನು ಕತ್ತರಿಸುವುದು. ಚಂದ್ರನ ಬಿಂಬದ |

| ಮರಗೆಲಸ ಮತ್ತು ಸಮಕಾಲೀನ ಶಿಕ್ಷಣದಲ್ಲಿ ಅದರ ಪಾತ್ರ | | | | |
|---|---|---|---|---|
| **ಚಟುವಟಿಕೆ** | **ವಯೋಮಾನ ಗುಂಪು / ತರಗತಿ 5–8 ವರ್ಷಗಳು** | **ವಯೋಮಾನ ಗುಂಪು / ತರಗತಿ 8–11 ವರ್ಷಗಳು** | **ವಯೋಮಾನ ಗುಂಪು / ತರಗತಿ 11–14 ವರ್ಷಗಳು** | **ಬೆಳೆಸಲಾದ ಗುಣಗಳು** |
| | | ಬಳಸಬಹುದು. | | ಹಂತಗಳಿಗೂ ಮರಗಿಡಗಳ ಬೆಳವಣಿಗೆಗೂ ಹಾಗೂ ಸಸ್ಯರಸದ ಚಲನೆಗೂ ಇರುವ ಸಂಬಂಧವನ್ನು ಕಲ್ಪಿಸುವುದು. ಪಾರಂಪರಿಕವಾಗಿ ಬಿದಿರನ್ನು ಅಮಾವಾಸ್ಯೆ ದಿನದಂದೇ ಕತ್ತರಿಸಲಾಗುತ್ತಿತ್ತು. ಏಕೆಂದರೆ ಆ ಸಮಯದಲ್ಲಿ ಸಸ್ಯರಸವು ಕಡಿಮೆ ಇದ್ದು ಕೀಟಗಳ ದಾಳಿಯ ಸಾಧ್ಯತೆ ಕಡಿಮೆ ಇರುತ್ತದೆ. |
| ಚಟುವಟಿಕೆ.ಮರದ ವಸ್ತುಗಳನ್ನು ತಯಾರಿಸುವುದು | ನಿಜವಾದ (ಸ್ಕ್ರೂ)ತಿರುಪು, ಮರದ ಮೊಳೆ, ವಾಸ್ತವ ಅಡಿಕೆ-ಅಗುಳಿಗಳನ್ನು (ನಟ್ಸ್ & ಬೋಲ್ಟ್ಸ್) ಸ್ಕ್ರೂಡ್ರೈವರ್ಸ್, ಮರದ ಸುತ್ತಿಗೆ ಇತ್ಯಾದಿಗಳನ್ನು ಒಳಗೊಂಡ ಉಪಕರಣಗಳನ್ನು ಉಪಯೋಗಿಸುವುದು. ಮರದ ತುಂಡೊಂದನ್ನು ಅಥವಾ ತೆಂಗಿನ ಚಿಪ್ಪನ್ನು ತೆಗೆದುಕೊಂಡು ಮರಳು ಕಾಗದದಿಂದದ ಉಜ್ಜಿ ಹೊಳಪು ಬರಿಸಿ ಅದರಿಂದ ಲೋಟ ಅಥವಾ ಸೌಟುಗಳನ್ನು ತಯಾರಿಸುವುದು. | ಕೈಗೊಡಲಿ, ಲೋಹ ಕತ್ತರಿಸುವ ಗರಗಸ, ಸುತ್ತಿಗೆ ಇತ್ಯಾದಿ ಸರಳ ಉಪಕರಣಗಳನ್ನು ಬಳಸಿ ಸರಳವಾದ ಆಟಿಕೆಗಳನ್ನು ತಯಾರಿಸುವುದು. ಬುಗುರಿ, ದಾಂಡು, ಚಿನ್ನಿ–ದಾಂಡು, ದಾರ ಕಟ್ಟಿ ಎಳೆಯುವ ಆಟಿಕೆಗಳು ಇತ್ಯಾದಿ ವಸ್ತುಗಳನ್ನು ತಯಾರಿಸುವುದು. | 3 ವಸ್ತುಗಳು; ಮೊದಲನೆಯದು, ಅವರಿಗಿಷ್ಟವಾದ ಯಾವುದೇ ಒಂದು ವಸ್ತು, ಎರಡನೆಯದು, ಪಾದರಕ್ಷೆಗಳನ್ನು ಇಡುವ ಸ್ಟಾಂಡು, ನಿಯತಕಾಲಿಕೆಗಳನ್ನು ಇಡುವ ಸ್ಟಾಂಡು, ಸಣ್ಣ ಕಾಲುಮಣೆ ಇತ್ಯಾದಿ ಯಾವುದಾದರೂ ಉಪಯುಕ್ತ ವಸ್ತು. ಮೂರನೆಯದು, ಪೆನ್ ಸ್ಟ್ಯಾಂಡ್ ಅಥವಾ ಚಿತ್ರಗಳಿಗೆ ಹಾಕುವ ಚೌಕಟ್ಟು ಇತ್ಯಾದಿ ಯಾವುದೇ ಕಲಾತ್ಮಕವಾದ ಮತ್ತು ಉಪಯುಕ್ತ ವಸ್ತು. | ಕಾರ್ಯಕ್ಷಮತೆ, ತೃಪ್ತಿ ಮತ್ತು ಸಮಾಧಾನದ ಭಾವನೆಗಳು. ತನ್ನ ಸಾಮರ್ಥ್ಯ ಮತ್ತು ಮಿತಿಗಳನ್ನು ಅರಿಯುವುದು, ಸಹನೆ, ಪಟ್ಟು ಹಿಡಿದು ಕೆಲಸಮಾಡುವುದನ್ನು ಕುರಿತು ತಿಳಿಯುವುದು. ಕೈಗಳ ದೃಢತೆಯ ಮಹತ್ವವನ್ನು ಅರಿಯುವುದು ಮತ್ತು ಬುದ್ಧಿ ಉಪಯೋಗಿಸಿ ಸಮಸ್ಯೆಯನ್ನು ಪರಿಹರಿಸುವುದರ ಮೂಲಕ ಅದನ್ನು ಹೃದಯದ ಸೃಜನಶೀಲತೆಯೊಂದಿಗೆ ಬೆಸೆಯುವುದು. |
| ಕಾರ್ಯಕ್ಷಮತೆ ಮತ್ತು ವಿಷಯ, ಪರಿಕಲ್ಪನೆಗಳು | ಇಂತಹ ಕೆಲಸಗಳನ್ನು ಮಾಡುವಾಗ ನಿಶ್ಶಬ್ದತೆಯ ಅಗತ್ಯವನ್ನು ಅರಿಯುವುದು. ವಿವಿಧ ರೀತಿಯ ಜಂಟಿ ವಿಧಾನಗಳು ಆಕಾರಗಳು, ಗಾತ್ರ ಮತ್ತು ಹೊಂದಾಣಿಕೆ ಸಾಮರ್ಥ್ಯಗಳನ್ನು ಗಮನಿಸುವುದು. ಪ್ರಮಾಣಿತವಲ್ಲದ ಮಾಪನದ ಉಪಕರಣಗಳನ್ನು ಬಳಸಿ ಅಳೆಯುವುದು. ಕಣ್ಣು ಮತ್ತು ಕೈಗಳ ನಡುವಿನ ಹೊಂದಾಣಿಕೆ, ಸಹಕಾರ ಮತ್ತು ಸೃಜನಶೀಲ ಆಲೋಚನೆ. | ತಯಾರಿಸಿದ ವಸ್ತುಗಳಿಗೆ ಅನುಗುಣವಾಗಿ ಪರಿಕಲ್ಪನೆಗಳನ್ನು ಸೇರಿಸಿ. (ಬುಗುರಿಯಾಗಿದ್ದರೆ, ಗಿರ್ರನೆ ತಿರುಗುವ, ಚಲನೆ) ವಿವಿಧ ಬಗೆಯ ಚಲನೆಯ ಕುರಿತು ಮಾತನಾಡಿ. ಚಿನ್ನಿ–ದಾಂಡು, ಚೆಂಡು–ದಾಂಡು, ಕೇವಲ ಚೆಂಡು, ಎಳೆಯುವ **ಆಟಿಕೆ. ವಿಕ್ಷೇಪಪಥ ಚಲನೆ, ಸರಳರೇಖಾ ಚಲನೆ, ಸುತ್ತುವ ಚಲನೆ, ಲಯಬದ್ಧ ಅಥವಾ ಲೋಲಕದಂತಹ ಚಲನೆ ಮತ್ತು ಆವರ್ತಕ ಅಥವಾ ಚಕ್ರೀಯ ಚಲನೆ**. ಯಾವ ವಸ್ತುಗಳು ತನ್ನ ಸುತ್ತ ತಾನೆ ಅಥವಾ ಗಿರ್ರನೆ ತಿರುಗುತ್ತವೆ: ಭೂಮಿ ಭೂಮಿಯಲ್ಲಿ ಹಗಲು ಮತ್ತು ರಾತ್ರಿ | ಬಲದ ಪರಿಕಲ್ಪನೆಗಳು: ಕೆಲಸವು ಆಗುವಂತೆ ಇದು ಹೇಗೆ ಮಾಡುತ್ತದೆ. ಘರ್ಷಣೆ ಮತ್ತು ಇದು ಹೇಗೆ ಚಲನೆಯನ್ನು ನಿಲ್ಲಿಸುತ್ತದೆ. ಆವೇಗ ಮತ್ತು ಬಸ್ಸು ಇದ್ದಕ್ಕಿದ್ದಂತೆ ನಿಂತಾಗ ನಾವು ಹೇಗೆ ಸೀಟಿನಿಂದ ಹೊರಕ್ಕೆಸೆಯಲ್ಪಡುತ್ತೇವೆ. ಸಾಪೇಕ್ಷ ಚಲನೆ; ನಾವು ಒಂದು ದಿಕ್ಕಿನಲ್ಲಿ ಹೋಗುತ್ತಿರುವಾಗ ಇತರ ವಸ್ತುಗಳು ನಮ್ಮ ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತಿರುವಂತೆ ಕಾಣುವುದು. ನಾವು ಎಲ್ಲಿಯೇ ಹೋದರೂ ಎಷ್ಟೇ ವೇಗವಾಗಿ ಹೋದರೂ ಚಂದ್ರನು ನಮ್ಮನ್ನು ಹಿಂಬಾಲಿಸುವಂತೆ ಹೇಗೆ ತೋರುತ್ತದೆ. ವಿವಿಧ ಅಕ್ಷದ ಪರಿಕಲ್ಪನೆ. ತರಹದ ಸದ್ದು ಮಾಡುತ್ತಾ ಗಿರಕಿ ಹೊಡೆಯುವ ಆಟಿಕೆಗಳನ್ನು | ಕೌಶಲ್ಯಗಳು: ಮೇಲಿನಿಂದ ವಸ್ತುವಿನ ನೋಟ, ಪಾರ್ಶ್ವ ನೋಟವನ್ನು ಚಿತ್ರಿಸುವುದು. ಗಾತ್ರ ಮತ್ತು ಬಳಸಬೇಕಾದ ಸಾಮಗ್ರಿಗಳು– ಯಾವ ಪ್ರಜಾತಿ ಮರ ಅಥವಾ ಸಂಸ್ಕರಿತ ಮರ. ಸಾಮಗ್ರಿಗಳನ್ನು ತರಿಸಿಕೊಳ್ಳುವುದು; ಸಾಮಗ್ರಿಗಳ ವೆಚ್ಚ ಮತ್ತು ಕೂಲಿಯನ್ನು ಲೆಕ್ಕ ಹಾಕಿ, ವಸ್ತುವಿನ ಬೆಲೆಯನ್ನು ನಿರ್ಧರಿಸುವುದು. ದುಡಿಮೆಯ ಮೌಲ್ಯದ ಸಮರ್ಥನೆ (ಆತ್ಮ ಗೌರವ) ಉಪಕರಣ, ಸಾಧನಗಳನ್ನು ವ್ಯವಸ್ಥಿತವಾಗಿ ಹೇಗೆ ಉಪಯೋಗಿಸುವುದು ಮತ್ತು ಹೇಗೆ ವ್ಯವಸ್ಥಿತವಾಗಿ ಇಡುವುದು. **ಹೆಚ್ಚಿನ ಪರಿಕಲ್ಪನೆಗಳು;** ಒಂದು ಚಿಕ್ಕ ಪ್ಲಾಸ್ಟಿಕ್ ಬಾಟಲಿಯನ್ನು |

| ಮರಗೆಲಸ ಮತ್ತು ಸಮಕಾಲೀನ ಶಿಕ್ಷಣದಲ್ಲಿ ಅದರ ಪಾತ್ರ | | | | |
|---|---|---|---|---|
| **ಚಟುವಟಿಕೆ** | **ವಯೋಮಾನ ಗುಂಪು / ತರಗತಿ 5–8 ವರ್ಷಗಳು** | **ವಯೋಮಾನ ಗುಂಪು / ತರಗತಿ 8–11 ವರ್ಷಗಳು** | **ವಯೋಮಾನ ಗುಂಪು / ತರಗತಿ 11–14 ವರ್ಷಗಳು** | **ಬೆಳೆಸಲಾದ ಗುಣಗಳು** |
| | | ಉಂಟಾಗುವುದು ಭೂಮಿಯ ಅಕ್ಷದ ಮೇಲಿನ ಚಲನೆಯಿಂದ. ಋತು ಮಾನಗಳು ಚಕ್ರೀಯ ಚಲನೆಗಳಿಂದ ಆಗುತ್ತವೆ. | ಮಾಡುವುದು (ಅರವಿಂದ ಗುಪ್ತಾ ಅವರ ಪುಸ್ತಕದಲ್ಲಿ ಬಹಳಷ್ಟಿವೆ) | ತೆಗೆದುಕೊಂಡು, ಅದನ್ನು ಕತ್ತರಿಸಿ, ಅರ್ಧದಷ್ಟು ನೀರು ತುಂಬಿ. ಅದರ ಸುತ್ತಲೂ ದಾರವೊಂದನ್ನು ಕಟ್ಟಿ ತಿರುಗಿಸಿ. ನೀರು ಬಾಟಲಿಯಿಂದ ಹೊರಚೆಲ್ಲುವುದಿಲ್ಲ ಎನ್ನುವುದನ್ನು ಗಮನಿಸಿ. ಬುಗುರಿಯನ್ನು ಬೀಸಿ ಎಸೆಯುವಾಗ ಮತ್ತು ಅದು ತಿರುಗುವಾಗಲೂ ಕೂಡ ಕೇಂದ್ರಾಭಿಮುಖ ಹಾಗೂ ಕೇಂದ್ರಾಪಗಾಮಿ ಬಲವನ್ನು ಗಮನಿಸಿ. ಚರಕ, ತಕಲಿ ಕೆಲಸ ಮಾಡುವುದನ್ನು ಗಮನಿಸಿ. ಬಣ್ಣದ ತಟ್ಟೆಯನ್ನು ತಯಾರಿಸಿ. |
| ಚರ್ಚೆ ಮತ್ತು ರಂಗಚಟುವಟಿಕೆಗಳು | ಪಾರಂಪರಿಕ ಕರಕುಶಲ ಕಲೆಗಳು ಯಾವುವು, ಅವು ಹೇಗೆ ಕಣ್ಮರೆಯಾಗುತ್ತಿವೆ ಎಂಬುದನ್ನು ಚರ್ಚಿಸಿ: ಕಣ್ಮರೆಯಾಗುತ್ತಿರುವ ಪಾರಂಪರಿಕ ಕರಕುಶಲ ಕಲೆಯ ವಸ್ತುವಿನ ವಿಷಯವನ್ನು ಆಧರಿಸಿ,ಅದರ ಮೇಲೆ ಎಲ್ಲರೂ ಸೇರಿ, ಮೂರೂ ವಯೋಮಾನದ ಗುಂಪುಗಳಿಗೆ ಸೂಕ್ತವಾಗುವ ಹಾಗೆ ಮಕ್ಕಳ ಸಾಮರ್ಥ್ಯ ಮತ್ತು ತಿಳುವಳಿಕೆಗೆ ಅನುಗುಣವಾಗಿ ಕತೆಯೊಂದನ್ನು ಬರೆಯಿರಿ. ಅದನ್ನು ನಾಟಕವನ್ನಾಗಿ ಪರಿವರ್ತಿಸಿ. ಸುಗಮಕಾರರು ನಾಟಕದ ಕತೆಯನ್ನು ಬರೆಯುವುದಕ್ಕೆ ನೆರವಾಗುತ್ತಾರೆ ಮತ್ತು ನಾಟಕವನ್ನು ಇಡೀ ಶಾಲೆಯ ಮಕ್ಕಳ ಎದುರು ಪ್ರದರ್ಶಿಸಲಾಗುತ್ತದೆ. | | | ಭಾಷಾ ಸಾಮರ್ಥ್ಯ, ಆತ್ಮವಿಶ್ವಾಸ, ಸಾಮೂಹಿಕ ಸೃಜನಶೀಲತೆ ಇತ್ಯಾದಿ. |

ಮುಂಬಯಿಯಲ್ಲಿ ಹುಟ್ಟಿ ಬೆಳೆದ **ಮೀನಾಕ್ಷಿ**ಯವರು ಸರ್ ಜೆ.ಜೆ. ಕಾಲೇಜ್ ಆಫ್ ಆರ್ಕಿಟೆಕ್ಚರ್‌ನಿಂದ ವಾಸ್ತುಶಿಲ್ಪ ವಿಜ್ಞಾನದಲ್ಲಿ ಪದವಿ ಪಡೆದಿರುತ್ತಾರೆ. ಇವರು ಪಾಂಡಿಚೆರಿ (ಪುದುಚೇರಿ) ಬಳಿಯಆರೋವಿಲ್ಲೆಯಲ್ಲಿ ಕಡಿಮೆ ವೆಚ್ಚದ, ಪರಿಸರ–ಸ್ನೇಹಿ ಕಟ್ಟಡ ತಂತ್ರಜ್ಞಾನ ಬಳಸಿ ಕೆಲಸ ಮಾಡಿರುತ್ತಾರೆ. ಹಲವಾರು ವರ್ಷಗಳ ಕಾಲ ಇವರು ತಮ್ಮ ಭಾಗೀದಾರರಾದ ಉಮೇಶ್ ಅವರ ಜೊತೆ ಸೇರಿ ತಮಿಳುನಾಡಿನ ಧರ್ಮಾಪುರಿ ಜಿಲ್ಲೆಯ, ಆಗಾಗ ಬರಕ್ಕೆ ತುತ್ತಾಗುವ ಪ್ರದೇಶದಲ್ಲಿ ಕೃಷಿ, ಕಟ್ಟಡ ನಿರ್ಮಾಣ ಮತ್ತು ಶಿಕ್ಷಣಕ್ಷೇತ್ರದಲ್ಲಿನ ಅನೇಕ ಪರ್ಯಾಯ ಪದ್ಧತಿಗಳನ್ನು ಅನುಸರಿಸಿ ಕೆಲಸ ಮಾಡಿರುತ್ತಾರೆ. 2000ರಲ್ಲಿ ಅವರಿಬ್ಬರೂ ಸೇರಿ, ಮಾರಿಯಾ ಮೊಂಟೆಸ್ಸರಿ, ಡೇವಿಡ್ ಹಾರ್ಸ್ಬರ್ಗ, ರುಡಾಲ್ಫ್ ಸ್ಟೈನರ್, ಜಾನೆಟ್ ಮತ್ತು ಗ್ಲೆನ್ ಡೋಮನ್‌ರವರು ಕಾರ್ಯಗತಗೊಳಿಸಿ ತೋರಿಸಿದ ವಿಧಾನಗಳನ್ನು ಬಳಸಿ, ರವೀಂದ್ರನಾಥ್ ಠಾಕೂರ, ಮಹಾತ್ಮಾ ಗಾಂಧಿ ಮತ್ತು ಇ. ಎಫ್. ಶುಮಾಕರ್‌ರವರ ಸಿದ್ಧಾಂತಗಳನ್ನು ಆಧರಿಸಿದ ಶಾಲೆಯೊಂದನ್ನು ಆರಂಭಿಸಿದರು. ಈಗ ಅವರು ಪುವಿಧಾಮ್ ರೂರಲ್ ಡೆವಲಪ್‌ಮೆಂಟ್ ಟ್ರಸ್ಟ್ ಎನ್ನುವ ಸಂಸ್ಥೆಯನ್ನು ನಡೆಸುತ್ತಿದ್ದಾರೆ. ಇದು ಪರಿಣಾಮಕಾರೀ ಸಾವಯವ ಕೃಷಿ ತಂತ್ರಗಳನ್ನು ಅಭಿವೃದ್ಧಿಪಡಿಸುವುದರ ಬಗ್ಗೆ ಕೆಲಸ ಮಾಡುತ್ತದೆ ಹಾಗೂ ಭಾರತದ, ತಮಿಳುನಾಡಿನ ಧರ್ಮಪುರಿಯ ನಾಗರಕೂಡಲ್ ಪ್ರದೇಶದಲ್ಲಿನ ಮಕ್ಕಳಿಗೆ ಮಾನವೀಯ ಮತ್ತು ಶಿಶು–ಕೇಂದ್ರಿತ, ಶೈಕ್ಷಣಿಕ ವಾತಾವರಣವನ್ನು ಒದಗಿಸುತ್ತದೆ. ಹೆಚ್ಚಿನ ವಿವರಗಳಿಗಾಗಿ www.puvidham.org.ನ್ನು ನೋಡಿ. ಮೀನಾಕ್ಷಿಯವರನ್ನು puvidham@gmail.com ಮೂಲಕವೂ ಸಂಪರ್ಕಿಸಬಹುದು. **ಅನುವಾದ**: ಸಹನಾ ಹೆಗ್ಗಡೆ **ಪರಿಶೀಲನೆ**: ಜನಾರ್ಧನ್